SRI K. H. PATIL.—Whatever is possible under the rules will certainly be done.

ಶ್ರೀ ಕೊಣಂದೂರು ಲಿಂಗಪ್ಪ.—ಅಲ್ಲಿರುವ ಪ್ರಾಣಿಗಳು ಫೌಲ್ಟ್ರಿಯಿಂದ ಬರತಕ್ಕ ಮೊಟ್ಟೆಗಳನ್ನು ತಿನ್ನದೆ ಖಾನಗಿಯವರ ಮನೆಯಿಂದ ಬರುವ ಮೊಟ್ಟೆಗಳನ್ನು ತಿನ್ನುತ್ತವೆ ಎನ್ನುವ ಸುದ್ದಿ ಇದೆ. ಇದರಲ್ಲಿ ಲಕ್ಷಾಂತರ ರೂಪಾಯಿಗಳ ದುರ್ವ್ಯವಹಾರ ನಡೆಯುತ್ತಿದೆ. ಆದ್ದರಿಂದ ಈ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳುತ್ತೀರಿ ?

SRI K. H. PATIL.—Whatever possible under Rules will certainly be looked into.

Matter under Rule 312 :

Re : Press Statement by some Ministers about non-harmony in the State Cabinet.

† ಶ್ರೀ ಎಚ್. ಡಿ ದೇವೇಗೌಡ (ಹೊಳೆನರಸೀಪುರ).—ಮಾನ್ಯ ಸಭಾಧ್ಯಕ್ಷರೇ, ನಿನ್ನೆ ಮುಖ್ಯಮಂತ್ರಿಗಳು ಸಭೆಯಲ್ಲಿ ಕಾರಣಾಂತರದಿಂದ ಇದ್ದಿಲ್ಲ, ರೂಲ್ 312ರ ಕೆಳಗೆ ತಮ್ಮ ಅನುಮತಿಯನ್ನು ಕೇಳಿ ನಡೆದ ಸಂಪುಟದ ಹಿರಿಯ ಸದಸ್ಯರು ಮಾಡಿರತಕ್ಕ ಪತ್ರಿಕೆ ಹೇಳಿಕೆಯ ಮೇಲೆ ಸಾಕಷ್ಟು ಸಭೆಯಲ್ಲಿ ಚರ್ಚೆಯಾಗಿದೆ. ಈಗ ಮುಖ್ಯಮಂತ್ರಿಗಳು ಸಭೆಗೆ ಆಗಮಿಸಿದ್ದಾರೆ. ಅವರು ಇದರ ಬಗ್ಗೆ ತಮ್ಮ ನಿಲುವು ಏನು ಎನ್ನುವುದನ್ನು ಸಭೆಗೆ ತಿಳಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಏಕೆಂದರೆ, ನಿನ್ನೆ ನಾನು ಪ್ರಸ್ತಾಪ ಮಾಡಿದಂಥ ಎರಡು ವಿಷಯಗಳನ್ನು ಈ ದಿವಸ ಪ್ರಸ್ತಾಪಮಾಡತಕ್ಕದ್ದು ಉಚಿತವಲ್ಲ ಎಂದು ತಿಳಿದುಕೊಂಡಿದ್ದೇವೆ. ಮತ್ತು ನಾನು ಸಭೆಯ ಕಾಲವನ್ನು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಈ ಸಂದರ್ಭದಲ್ಲಿ ನಾನು ಇನ್ನೊಂದು ವಿಷಯವನ್ನು ಸ್ಪಷ್ಟೀಕರಣ ಮಾಡುವುದಕ್ಕೆ ಇಷ್ಟಪಡುತ್ತೇನೆ. ಚರ್ಚೆ ನಡೆಯತಕ್ಕಂಥ ಕಾಲದಲ್ಲಿ ಯಾರು ಮಂತ್ರಿಗಳು ಇದರ ಬಗ್ಗೆ ಹೇಳಿಕೆಯನ್ನು ಕೊಟ್ಟಿದ್ದಾರೋ ಅವರೂ ಕೂಡ ಸಭೆಯಲ್ಲಿ ವಿವರಣೆಯನ್ನು ನೀಡಿದ್ದಾರೆ. ಪತ್ರಿಕೆಯಲ್ಲಿ ಬಂದಿರತಕ್ಕದ್ದು ಸತ್ಯ, ಅದಕ್ಕೆ ನಾವು ಭಾಗಿಗಳಾಗಿದ್ದೇವೆ, ಮತ್ತು ಅದಕ್ಕೆ ನಾವು ಜವಾಬ್ದಾರರು ಎಂದು ಸ್ಪಷ್ಟೀಕರಣ ನೀಡಿದ್ದಾರೆ. ಇವತ್ತು ಪತ್ರಿಕೆಯಲ್ಲಿ ಬಂದಿರತಕ್ಕದ್ದನ್ನು ಮಾನ್ಯ ಮುಖ್ಯಮಂತ್ರಿಗಳು ಬಹುಶಃ ಓದಿಲ್ಲರೆ ಎಂದು ನಾನು ತಿಳಿದಿದ್ದೇನೆ. ಇವತ್ತು ನಡೆದ ಸಂಪುಟದಲ್ಲಿ ಉಪಸ್ಥಿತರಾಗಿರತಕ್ಕ ಈ ಒಂದು ದೊಡ್ಡ ಒಡಕಿನಿಂದ ಆಡಳಿತದಬಗ್ಗೆ ಆಗತಕ್ಕ ಧಕ್ಕೆ ಏನು ಎನ್ನುವುದರ ಬಗ್ಗೆ ಸಭೆಯಲ್ಲಿ ಪ್ರತಿಯೊಬ್ಬ ಸದಸ್ಯರೂ ಕಳಕಳಿಯಿಂದ ಇದ್ದಾರೆಂದು ನಾನು ಭಾವಿಸುತ್ತೇನೆ. ಇವತ್ತು ನಾನು ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಕೆಲವು ವಿಷಯಗಳ ಬಗ್ಗೆ ಸೆಳೆಯುವುದಕ್ಕೆ ಇಷ್ಟಪಡುತ್ತೇನೆ. ಅವರು ಪತ್ರಿಕೆಗಳಲ್ಲಿ ಹೇಳಿರತಕ್ಕದ್ದನ್ನು ಸ್ಪಷ್ಟೀಕರಣ ಮಾಡಿದ್ದಾರೆ. ಇದನ್ನು ಮಾನ್ಯಮುಖ್ಯ ಮಂತ್ರಿಗಳು ಲಘುವಾಗಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂದು ನಾನು ತಿಳಿದಿದ್ದೇನೆ. ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಬಂದಿರತಕ್ಕ ಒಂದು ವಿಷಯವನ್ನು ಇಲ್ಲಿ ನಾನೂ ಉಲ್ಲೇಖನ ಬಯಸುತ್ತೇನೆ.

> "It must be discouraging for a man like Mr. Urs who always hankers after power and position Mr. Patil went on in his diatribe ..."

ಅಲ್ಲಿಂದ ಮುಂದಕ್ಕೆ ಹೇಳಿಕೊಂಡು ಹೋಗಿದ್ದಾರೆ. ಇಷ್ಟೇ ಅಲ್ಲ,

> "What about his position when he dwells in a glass house? asked Mr. Patil, adding : "Should he dare throw a stone at others".

ಇನ್ನೂ ಕೆಲವು ವಾಖ್ಯಗಳನ್ನು ಅವರು ಹೇಳಿದ್ದಾರೆ. ನಿನ್ನೆ ನಾನು ಅವುಗಳ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ನಮ್ಮ ಮತ್ತೊಬ್ಬ ಹಿರಿಯ ಸಚಿವರು ಹೇಳಿದ್ದಾರೆ :

"The second assertion came in reply to a question how the Cabinet could function harmoniously in view of such a divergence of views as, for instance, the one which had surfaced today. "It is entirely for the leader to decide how this can be done" he said, "If he wants, he can get rid of us".

The only course according to me is to invoke the constitutional provision which is enjoyed by the Chief Minister as a Leader to recommend for their dismissal.

ಮಾನ್ಯ ಸಭಾಧ್ಯಕ್ಷಣಿಯವರೇ, ಇದು ಇಷ್ಟೇ ಅಲ್ಲ, ಕ್ಯಾಬಿನೆಟ್ ತೀರ್ಮಾನ ಕೂಡ ತೆಗೆದು ಕೊಳ್ಳುವಾಗ ನಾಯಕರು ಸಚಿವಸಂಪುಟದ ಎಲ್ಲಾ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ ಎಂದು ಹೇಳಿದ್ದಾರೆ, ಇದು ಬಹಳ ಮುಖ್ಯವಾದ ವಿಷಯ. ಯಾವ ಸಂದರ್ಭದಲ್ಲಿ ತಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ ಎನ್ನುವುದನ್ನೂ ಕೂಡ ಅವರುಗಳು ಹೇಳಿದ್ದಾರೆ. ಈ ವಿಷಯ ವನ್ನು ನಾನು ವಿವರವಾಗಿ ಪ್ರಸ್ತಾಪಮಾಡುವುದಕ್ಕೆ ಹೋಗುವುದಿಲ್ಲ. ಕಮಿಷನ್ ಬಗ್ಗೆ ಇಲ್ಲಿ ಚರ್ಚೆ ಮಾಡಲಕ್ಕೆ ನಾವು ತಮ್ಮ ಅನುಮತಿಯನ್ನು ಪಡೆದಿದ್ದೇವೆ. ಇದರ ಬಗ್ಗೆಯೂ ಅವರುಗಳು ಏನು ಹೇಳಿದ್ದಾರೆ ಎನ್ನುವುದೂ ಬಹಳ ಮುಖ್ಯವಾದ ವಿಷಯ.

"Not only Mr. Siddaveerappa but also Mr. Patil and Revenue Minister Huchamasti Gowda claimed at the news conference that both on the appointment of the Iqbal Hussain Commission and on filing a suit in the Supreme Court against the appointment of the Grover Commission by the Centre, there had been no detailed discussions in the Cabinet. The discussions, if any, were only informal.

Mr. Siddaveerappa, in fact, said that some of them had taken the stand that the Centre was well within its right to appoint a commission on inquiry against the State Government...

At the same time, all the three of them asserted that a decision "as such" had not been taken in the Cabinet on both the issues".

ಈ ಅವರ ಪತ್ರಿಕಾ ಹೇಳಿಕೆಯನ್ನು ಅವರುಗಳು ಸಭೆಯಲ್ಲಿಯೂ ಕೂಡ ಸಮರ್ಥನೆ ಮಾಡಿ ದ್ದಾರೆ. ಇವತ್ತು ನಾವು ಯಾವುದೇ ಬೇಡಿಕೆಗಳಿಗೆ ಮುಂಜೂರಾತಿ ಕೊಡುವುದಕ್ಕೆ ಮುಂಚೆ, ಸಚಿವ ಸಂಪುಟದಲ್ಲಿರತಕ್ಕ ಒಂದು ಒಡಕು ಏನು ಇದೆ ಅದು ತೀರ್ಮಾನವಾಗಬೇಕು, ಮತ್ತು ಅವರು ತಮ್ಮ ಮುಖಂಡತ್ವವನ್ನೂ ಕೂಡ ಪ್ರಶ್ನೆ ಮಾಡಿದ್ದಾರೆ. ಅವರು ಇನ್ನೂ ಬಹಳ ದೂರ ಹೋಗಿದ್ದಾರೆ,

"When a reporter asked whether it was not true that Mr. Urs enjoyed a comfortable majority in the Legislature Congress Party, Mr. Patil snapped : 'Where has this been tested ? .....".

ಆದ್ದರಿಂದ ನಮ್ಮ ಮುಂದೆ ಇರತಕ್ಕದ್ದು, ಈ 7-8 ಜನ ಮಂತ್ರಿಗಳು ತೆಗೆದುಕೊಂಡಂಥ ನಿಲುವು ಏನು ಇದೆ ಅದನ್ನು ನಾನು ಪ್ರಸ್ತಾಪಮಾಡತಕ್ಕ ಅವಶ್ಯಕತೆ ಇಲ್ಲ, ಇದು ಗಹನವಾದ ವಿಷಯ, ತೀವ್ರತರವಾದ ವಿಷಯ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡಬೇಕಾಗುತ್ತದೆ. ಇಲ್ಲ, ತಮಗೆ ಇರತಕ್ಕ ಅಧಿಕಾರವನ್ನು ಉಪಯೋಗ ಮಾಡಿ ತಮ್ಮ 8 ಜನ ಮಂತ್ರಿಗಳನ್ನು ಡಿಸ್‌ಮಿಸ್ ಮಾಡಬೇಕಾಗುತ್ತದೆ, ನಡೆವ ಸಂಪುಟ ಮತ್ತು ಸರ್ಕಾರಕ್ಕೆ ಹೊಂದಾಣಿಕೆಯಿಂದ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ, ಮತ್ತು ಕೆಲಸಮಾಡತಕ್ಕ ನಿರ್ಣಯಗಳನ್ನು ತೆಗೆದುಕೊಳ್ಳುವುದಕ್ಕೂ ಸಾಧ್ಯವಿಲ್ಲ. ನಿಮ್ಮ ಮುಖಂಡತ್ವದಲ್ಲಿ ಸಂಪುಟದ ಸದಸ್ಯರಿಗೆ ವಿಶ್ವಾಸವಿಲ್ಲ ಎಂದರೆ ತಾವು ರಾಜೀನಾಮೆಯನ್ನು ಕೊಡಬೇಕಾಗುತ್ತದೆ. ಈ ಎರಡು ಪ್ರಮುಖವಾದ ಪ್ರಶ್ನೆಗಳು ನಮ್ಮ ಮುಂದೆ ಇವೆ. ಈ ಎರಡು ವಿಷಯಗಳ ಬಗ್ಗೆಯೂ ತಾವು ತೀರ್ಮಾನ ಮಾಡಬೇಕಾಗುತ್ತದೆ. ತೀರ್ಮಾನ ಮಾಡಿದ ಮೇಲೆ ನಾವು ಸಭೆಯಲ್ಲಿ ಬೇಡಿಕೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಖಚಿತವಾದ ಅಭಿಪ್ರಾಯವನ್ನು ಸಭೆಗೆ ತಿಳಿಸಬೇಕಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಮಾನ್ಯ ಮಂತ್ರಿಗಳು ಒಂದು ಸತ್‌ಸಂಪ್ರದಾಯವನ್ನು ಹಾಕಬೇಕು ಎನ್ನುವ ದೃಷ್ಟಿಯಿಂದ ಹೇಳಿರುವುದನ್ನು ನಾವು ಮೆಚ್ಚಬೇಕಾಗುತ್ತದೆ. ಮುಂದೆ ಅಧಿಕಾರಕ್ಕೆ ಬರುವವರು ಯಾರೇ ಇರಲಿ, ಅವರು ಇಂಥ ಒಂದು ವಿಚಾರಣೆಗೆ ಒಂದು ಸತ್ಸಂಪ್ರದಾಯವನ್ನು ಹಾಕಬೇಕು. ಇಂಥ ಒಂದು ನಿರ್ಣಯವನ್ನು ಮಂತ್ರಿಗಳು ಮಾಡಿದ್ದಾರೆ ಅದನ್ನು ನಾವುಗಳು ಸ್ವಾಗತಿಸಬೇಕಾಗುತ್ತದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಈ ಗಹನವಾದ ವಿಷಯ ಏನು ಇದೆ ಇದರ ಬಗ್ಗೆ ಸಭೆಗೆ ತಿಳಿಸಬೇಕು, ಅವರು ತಿಳಿಸಿದ ಮೇಲೆ ಸಭೆಯು ಕಾರ್ಯಕಲಾಪಗಳನ್ನು ನಡೆಸಬೇಕೇ ಎನ್ನುವುದನ್ನು ನಿರ್ಣಯ ಮಾಡಬೇಕಾಗುತ್ತದೆ,

2-30 P. M.

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು ಕೊಡುವುದಕ್ಕೆ ಮುಂಚೆ ಒಂದು ಮಾತನ್ನು ಅವರ ನೆನಪಿಗೆ ತಂದು ಕೊಡುವುದು ಒಳ್ಳೆಯದು ಎಂದು ನಾನು ಭಾವಿಸುತ್ತೇನೆ. ಮುಖ್ಯಮಂತ್ರಿಗಳ ಹಾಗೂ ಅವರ ಮಂತ್ರಿಗಳಲ್ಲಿ ಉಂಟಾದ ವಿರಸ ನಮಗೆ ಅಂದರೆ ಈ ಸದನದ ಸದಸ್ಯರಿಗೆ ಎಷ್ಟರಮಟ್ಟಿಗೆ ಸಂಬಂಧಪಟ್ಟರುತ್ತದೆ ಅನ್ನುವುದನ್ನು ನಾವು ಈ ಸಂದರ್ಭದಲ್ಲಿ ಹೇಳಿಬೇಕಾಗುತ್ತದೆ. ಏತಕ್ಕೆಂದರೆ ಅವರ ಪಕ್ಷದ ಹಂತಹಂತದಲ್ಲೂ ವಿರಸ ಉಂಟಾಗಿರುವುದರಿಂದ ನಾನು ಈ ಮಾತನ್ನು ತಮ್ಮ ಗಮನಕ್ಕೆ ತರಲೇಬೇಕಾಗುತ್ತದೆ. ಶ್ರೀಮಾನ್ ಸಿದ್ದವೀರಪ್ಪನವರ ಮಾತಿನಲ್ಲೇ ಹೇಳಬೇಕಾದರೆ ಅದು ಈ ರೀತಿ ಇದೆ : ಅವರು ಏನು ಹೇಳಿದ್ದಾರೆ ಎಂದರೆ, ಈ ವಿರಸ ಎಷ್ಟರಮಟ್ಟಿಗೆ ಹೋಗಿದೆ ಎಂದರೆ "ಎಲ್ಲಿಯವರೆಗೆ ಮಂತ್ರಿಮಂಡಲದಲ್ಲಿ ಸಾಮರಸ್ಯ ಇರುತ್ತದೋ ಅಲ್ಲಿಯವರೆಗೂ ಈ ಮಂತ್ರಿಮಂಡಲದಲ್ಲಿ ಕೆಲಸ ಚೆನ್ನಾಗಿ ನಡೆಯುತ್ತದೆ" ಎಂದು ಹೇಳಿದ್ದಾರೆ ಇದರಿಂದ ಏನು ಪರಿಣಾಮ ಉಂಟಾಗುತ್ತದೆ ಅನ್ನುವುದನ್ನು ಯೋಚನೆ ಮಾಡಬೇಕು. ಶ್ರೀಮಾನ್ ಸಿದ್ದವೀರಪ್ಪನವರು ಇನ್ನೂ ಒಂದು ಮಾತನ್ನು ಹೇಳಿರುವುದನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತೇನೆ, ಅದು ಈ ರೀತಿ ಇದೆ.—

> "The deep sense of mutual distrust which prevails in the Cabinet was also highlighted when Mr K. H. Patil interpreted in reply to a question that the usual equations of dissidents and non-dissidents did not arise in Karnataka at all". ಎಂದು

ಅಂದಾಗ ಇದರಲ್ಲಿ ತೀವ್ರತರವಾದ ಭಿನ್ನಾಭಿಪ್ರಾಯ ಇದೆ ಎನ್ನುವುದು ಕಂಡು ಬರುತ್ತದೆ ಎಂದು ಹೇಳುತ್ತೇನೆ. ಹಾಗೆಯೇ ಶ್ರೀಮಾನ್ ಕೆ. ಎಚ್. ಪಾಟೀಲರು ಈ ಬಗ್ಗೆ ಒಂದು ಮಾತು ಹೇಳಿರುವುದನ್ನು ತಮ್ಮ ಗಮನಕ್ಕೆ ತರುತ್ತೇನೆ : ಅದು ಈ ರೀತಿ ಇದೆ.—

> "I am of the opinion he is trying to capitalise on the troubled atmosphere in the organisation for his selfish ends".

ಆಂದಾಗ ಈವೊತ್ತು ಹೆಚ್ಚು, ಕಡಿಮೆ ಅವರ ಮಂತ್ರಿಗಳೇ ಅವರ ನಾಯಕರನ್ನು ಇಂಪೀಚ್ ಮಾಡಿದ ಹಾಗಾಯಿತು. ಸ್ಪಷ್ಟವಾಗಿ ಲಕ್ಷಣ ತೋರಿಸಿದಂತಾಗಿದೆ. ಬಹುಶಃ ನಮ್ಮ ಕರ್ನಾಟಕ ಇತಿಹಾಸದಲ್ಲಿ ಈ ರೀತಿ ನಡೆದಿರುವುದು ಇದೇ ಮೊದಲನೆಯದು ಎಂದು ಹೇಳುತ್ತೇನೆ. ಒಬ್ಬಿಬ್ಬ ಮಂತ್ರಿಗಳಲ್ಲಿ 7 ಜನ ಮಂತ್ರಿಗಳೂ ಸೇರಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಕಾಗೋಡು ತಿಮ್ಮಪ್ಪನವರು ಆರ್ಗನೈಸೇಷನ್ ಅನ್ನುವ ಪದಪ್ರಯೋಗ ಮಾಡಿದ್ದಾರೆ. ಅದಕ್ಕೆ ನಾನು ಕೇಳುತ್ತೇನೆ. ಮತ್ತು ನಿನ್ನೆ ದಿವಸ ಅವರು ಸರ್ಕಾರದಲ್ಲಿ ಅಡಳಿತ ಕುಸಿದು ಬಿದ್ದಿದೆ ಅಂತ ಹೇಳಿದರು ಅದಕ್ಕೆ ನಾನು ಅವರನ್ನು ಕೇಳುವುದು ಇಷ್ಟೆ ಸರ್ಕಾರದ ಅಡಳಿತದಲ್ಲಿ ಯಾವ ರೀತಿಯಾಗಿ ಸಂಬಂಧ ಇದೆ ಅನ್ನುವುದು ಇವರಿಗೆ ಗೊತ್ತಿದೆಯೇ ? ಮತ್ತು ಯಾವರೀತಿಯಾಗಿ ಸರ್ಕಾರದ ಅಡಳಿತ ಕುಸಿದು ಬಿದ್ದಿದೆ ಅದು ಹೇಗೆ ಕುಸಿದುಬಿದ್ದಿದೆ ಎಲ್ಲಿ ಕುಸಿದಿದೆ ಅನುವುದನ್ನು ರುಜುವಾತು ಪಡಿಸುತ್ತೀರಾ ?

ಶ್ರೀ ಕಾಗೋಡು ತಿಮ್ಮಪ್ಪ.—ಆದುದರಿಂದಲೇನೇ the cabinet colleguse are impeaching their own leader. ಆದುದರಿಂದ ಮಂತ್ರಿಗಳು ಅವರ ನಾಯಕರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಅಷ್ಟೇ ಅಲ್ಲ ಅವರ ಗುಣಗಳನ್ನೂ ಮತ್ತು ಅವರ ನಡೆತೆಯನ್ನೂ ಟೀಕೆ ಮಾಡಿದ್ದಾರೆ. ಸರ್ಕಾರದಲ್ಲಿ ಯಾವರೀತಿ ನಡೆಯುತ್ತಾ ಇದೆ ಅನ್ನುವುದನ್ನು ಅವರು ಹೇಳಿದ್ದಾರೆ. ಮಂತ್ರಿಮಂಡಲ ಎಂದರೆ ಜಂಟೀ ಜವಾಬ್ದಾರಿಯಿಂದ ನಡೆಯುತಕ್ಕಂಥಾದ್ದು ಎಂದು ನಮಗೂ ಗೊತ್ತು. ನಿಮಗೂ ಗೊತ್ತು ಅವರುಗಳೇ ಹೇಳಿದ್ದಾರೆ, ಅನೇಕ ವಿಷಯಗಳು ಮಂತ್ರಿಮಂಡಲದಲ್ಲಿ ತೀರ್ಮಾನವಾಗದೇ ಇರುವಂಥಾ ವಿಷಯಗಳನ್ನು ಮುಖ್ಯಮಂತ್ರಿಗಳು ತಾವೇ ತೀರ್ಮಾನ ತೆಗೆದುಕೊಂಡಿದ್ದಾರೆ ಎಂದು. ಮತ್ತು ನಮ್ಮನ್ನು ಲಘುವಾಗಿ ಕಂಡಿದ್ದಾರೆ ಅಂತಲೂ ಹೇಳಿದ್ದಾರೆ. ಅನೇಕ ವಿಷಯಗಳಲ್ಲಿ ನಮ್ಮನ್ನು ವಿಚಾರ ಮಾಡಿಯೇ ಇಲ್ಲ. ನಮ್ಮನ್ನು ಕಡೆಗಣಿಸಿದ್ದಾರೆ ಅನ್ನುವ ಅನುಮಾನವನ್ನೂ ಕೂಡ ಅವರು ವ್ಯಕ್ತಪಡಿಸಿದ್ದಾರೆ.

ಶ್ರೀ ಎಸ್ ಬಂಗಾರಪ್ಪ.—'ವಿಚಾರ' ಅನ್ನುವ ಪದ ಮಾನ್ಯ ಸದಸ್ಯರು ಹೇಳಿದ್ದಾರೆ, ಹಾಗೆಂದರೆ ಏನು ?

ಶ್ರೀ ಕಾಗೋಡು ತಿಮ್ಮಪ್ಪ.—ಆ ಬಗ್ಗೆ ಹೇಳಬೇಕಾದರೆ ಅವರು ಯಾರನ್ನೂ ವಿಚಾರ ಮಾಡಿಲ್ಲ ಎಂದು ಹೇಳುತ್ತೇನೆ. ಮಂತ್ರಿಮಂಡಲ ಎಂದರೆ ಜಂಟೀ ಜವಾಬ್ದಾರಿಯಿಂದ ಒಗ್ಗಟ್ಟಿನಿಂದ ಕೆಲಸ ಮಾಡಬೇಕು. ಈಗ ಅವರಲ್ಲೇ ವಿಭಾಗವಾಗಿದ್ದಾರೆ. ಅವರನ್ನು ಕಂಡರೆ ಇವರಿಗೆ ಅನುಮಾನ ಇವರನ್ನು ಕಂಡರೆ ಅವರಿಗೆ ಅನುಮಾನವಾಗಿದೆ ಈ ಅನುಮಾನ ಇರುವುದರಿಂದ ಅವರುಗಳೆ ತಾವೇ ತಾವೇ ಬಚಾವಣೆ ಮಾಡಿಕೊಳ್ಳ ಬೇಕಾಗುವುದು ಸ್ವಾಭಾವಿಕ ಇದರಿಂದ ಆಡಳಿತದಲ್ಲಿ ಅವರುಗಳು ನಿರ್ವಹಿಸಬೇಕಾದ ಕೆಲಸದಲ್ಲಿ ಹಿಂದೆ ಬೀಳುತ್ತಿದ್ದಾರೆ. ಇದರಿಂದ ಈಗಾಗಲೇ ಅವರುಗಳು ಒಂದು ಹೆಜ್ಜೆಯನ್ನು ಹೊರಗೆ ಇಟ್ಟುಬಿಟ್ಟಿದ್ದಾರೆ. Deep sense of distruct is prevailing. ಸಂಪೂರ್ಣವಾಗಿ ಅವರಲ್ಲಿ ಅವಿಶ್ವಾಸ ಮೂಡಿಬಿಟ್ಟಿರುವುದರಿಂದ ಒಂದು ಹೆಜ್ಜೆಯನ್ನು ಹೊರಗೆ ಇಟ್ಟುಬಿಟ್ಟಿದ್ದಾರೆ. ಈ ಬಗ್ಗೆ ಯಾರನ್ನು ಇಟ್ಟುಕೊಳ್ಳಬೇಕು, ಯಾರನ್ನು ಬಿಟ್ಟುಬಿಡಬೇಕು ಅನ್ನುವುದು ನಾಯಕರಿಗೆ ಸಂಬಂಧಪಟ್ಟದ್ದು. ನಮಗೆ ಬೇಕಾದ್ದು ಸರ್ಕಾರದ ಕೆಲಸ ಚೆನ್ನಾಗಿ ನಡೆಯಬೇಕು, ನಾವು ಕೊಟ್ಟಂಥಾ ಹಣ ಚೆನ್ನಾಗಿ ಉಪಯೋಗವಾಗಬೇಕು, ನಿಮ್ಮ ನಿಮ್ಮಲ್ಲೇ ಒಂದು ಸಂಬಂಧ ಇಲ್ಲದೇ ಹೋದರೆ, ಒಬ್ಬರಿಗೊಬ್ಬರಿಗೆ ಪರಸ್ಪರ ವಿಶ್ವಾಸ ಇಲ್ಲದೇ ಹೋದರೆ ಸರ್ಕಾರದ ಕೆಲಸವನ್ನು ಖಂಡಿತಾ ಮಾಡುವುದಕ್ಕಾಗುವುದಿಲ್ಲ, ನಿನ್ನೆ ದಿವಸ ತಾವು ಡೆಲ್ಲಿಗೆ ಹೋಗಿದ್ದಿರಿ. ಯಾವ ಕೆಲಸಕ್ಕಾಗಿ ಹೋಗಿದ್ದರೋ ಏನೋ? ನಮಗೆ ಬೇಕಾಗಿರುವುದು ಹಣ ಸರಿಯಾದ ರೀತಿಯಲ್ಲಿ ಉಪಯೋಗವಾಗಬೇಕು, ಸರ್ಕಾರದ ಕೆಲಸ ಚೆನ್ನಾಗಿ ನಡೆಯಬೇಕು. ಈಗ ಇರುವುದು ಎರಡೇ ಮಾರ್ಗ ಅವರುಗಳಲ್ಲಿ ವಿಶ್ವಾಸ ಇಲ್ಲದೇ ಹೋದರೆ ಮಂತ್ರಿಮಂಡಲದಿಂದ ಹೊರಗೆ ಕಳುಹಿಸಬೇಕು ಇಲ್ಲದೇ ಹೋದರೆ ಅವರುಗಳೇ ತಿಳಿದು ಕೊಂಡು ಅವರ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಹೊರಗೆ ಬರಬೇಕು. ಅಲ್ಲದೆ ಈವೊತ್ತಿನ ದಿವಸ 7 ಜನ ಮಂತ್ರಿಗಳೂ ಕೂಡ ಒಂದು ಹೆಜ್ಜೆ ಮುಂದೆ ಇಟ್ಟು ನಾವು ಯಾವಾಗಲಾದರೂ ಕೂಡ ಈ ಮಂತ್ರಿಸ್ಥಾನದಿಂದ ಬಿಟ್ಟು ಬಿಡುತ್ತೇವೆ ಅನ್ನುವ ಒಂದು ತೀರ್ಮಾನಕ್ಕೆ ಬಂದಿದ್ದಾರೆ. ಈ ಬಗ್ಗೆ

ನೀವು ಒಂದು ತೀರ್ಮಾನಕ್ಕೆ ಬರಧೇ ಹೋದರೆ ಎತ್ತು ಏರಿಗೆ ಎಳಿತ್ತು, ಕೋಣ ನೀರಿಗೆ ಎಳಿತು ಅಂದ ಹಾಗೆ ಆಗುತ್ತೆ ಆದುದರಿಂದ ಈವಾಗ ತಮ್ಮ ಆಡಳಿತ ಕುಸಿದು ಬಿದ್ದಿದೆ ಎಂದು ನಾನು ಮುಖ್ಯಮಂತ್ರಿಗಳಲ್ಲ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಈವೊತ್ತಿನ ದಿವಸ ಕರ್ನಾಟಕ ಇತಿಹಾಸದಲ್ಲಿ ಇಂಥಾ ಘಟನೆ ನಡೆದದ್ದು ಇದೇ ಮೊದಲನ್ನೇ ಸಲ, ಆದುದರಿಂದ ಈ ಬಗ್ಗೆ ತಾವು ವಿವೇಚನಾ ರಹಿತವಾಗಿ ಕೆಲಸ ಮಾಡಬೇಕು ಎಂದು ಹೇಳುತ್ತೇನೆ. ತಾವು ಈ ಬಗ್ಗೆ ಒಂದು ಉತ್ತಮವಾದ ಒಂದು ಸತ್‌ಸಂಪ್ರದಾಯವನ್ನು ಹಾಕಿಕೊಡಬೇಕು. ಜನಗಳಿಗೆ ಇದರ ಬಗ್ಗೆ ಯಾವ ರೀತಿಯೂ ಗೊಂದಲ ಇರಬಾರದು ಅಲ್ಲದೆ ಅಧಿಕಾರಿಗಳಿಗೂ ಈ ಒಂದು ಗೊಂದಲಕ್ಕೆ ಸಿಕ್ಕಿ ಹಾಕಿಕೊಂಡಿರುವುದರಿಂದ ಅವರಿಗೂ ಸಹ ಸರ್ಕಾರದಲ್ಲಿ ಕೆಲಸ ಮಾಡುವುದಕ್ಕೆ ಕಷ್ಟವಾಗುತ್ತದೆ. ಹೇಗೆಂದರೆ ನಾವೇನಾದರೂ ಒಂದು ತೀರ್ಮಾನ ತೆಗೆದುಕೊಂಡರೆ ಮುಖ್ಯಮಂತ್ರಿಗಳು ಈ ಬಗ್ಗೆ ಇನ್ನೇನು ತೀರ್ಮಾನ ತೆಗೆದುಕೊಳ್ಳುತ್ತಾರೋ, ನಾವು ಯಾವರೀತಿ ಹೇಗೆ ತೀರ್ಮಾನ ಮಾಡಬೇಕು ಅವರುಗಳೂ ಕೂಡ ಈ ಗೊಂದಲಕ್ಕೆ ಸಿಕ್ಕಿ ಹಾಕಿಕೊಂಡಿರುವದರಿಂದ ಸರ್ಕಾರದ ಆಡಳಿತದಲ್ಲ ಅವರುಗಳು ಕೆಲಸ ಮಾಡುವುದಕ್ಕೆ ಕಷ್ಟವಾಗಿದೆ. ಈ ಗೊಂದಲಮಯ ವಾತಾವರಣದಲ್ಲಿ ಆ ಅಧಿಕಾರಿಗಳು ಉಳಿದಿದ್ದಾರೆ. ಈ ದಿಸೆಯಿಂದಾಗಿ ರಾಜ್ಯದ ಆಡಳಿತದಲ್ಲಿ ಯಾರೂ ಏನೂ ಕೊಡ ತಿಳಿಯದಾಗಿದೆ. ಇದನ್ನು ನಿವಾರಿಸಬೇಕಾದರೆ ಮುಖ್ಯ ಮಂತ್ರಿಗಳಿಗೆ ಇರುವುದು ಎರಡೇ ಮಾರ್ಗ. ಇನ್ನೊಂದು ಸಾರಿಯೂ ಸಹ ಅವರಿಗೆ ಸ್ಪಷ್ಟಪಡಿಸುತ್ತೇನೆ. ನಿಮ್ಮ ಕಾನ್ಸ್ಟಿಟ್ಯೂಷನ್ ಪ್ರಾವಿಷನ್ ಪ್ರಕಾರ ಯಾವ ರೂಲ್ಸ್ ಅನ್ವಯವಾಗುತ್ತದೋ ಅದನ್ನು ಅನುಸರಿಸಿ ಆ ಮಂತ್ರಾಂತರ ರಾಜ್ಯಕ್ಕೆ ಈಗ ಇರುವಂಥಾ ಬಿಕ್ಕಟ್ಟನ್ನು ನಿವಾರಿಸಬೇಕು ಎಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ನಾನು ಒಂದೆರಡು ಮಾತು ಹೇಳಲು ಅಪೇಕ್ಷಿಪಡುತ್ತೇನೆ.

ಅಧ್ಯಕ್ಷರು.—ಈಗಾಗಲೇ ಆ ಬಗ್ಗೆ ಎಲ್ಲಾ ವಿಷಯಗಳೂ ತಿಳಿದಿದೆ. ಇನ್ನು ಉಳಿದಿರುವಂಥಾ ವಿಚಾರ ಏನೂ ಇಲ್ಲವಲ್ಲಾ

ಶ್ರೀ ಕೋಣಂದೂರು ಲಿಂಗಪ್ಪ —ನಾನು ಹೇಳಬೇಕಾದ್ದು ಇಷ್ಟೆ? ಇನ್ನು ಉದಯಿಸುವ ಏಜಾರ ಅವರು ರಾಜೀನಾಮೆ ಕೊಡುವುದಷ್ಟೆ ಉಳಿದಿದೆ. ಜನಗಳಲ್ಲಿ ಈ ಬಗ್ಗೆ ಇರುವ ಒಂದು ಕಲ್ಪನೆಯನ್ನು ಮುಖ್ಯಮಂತ್ರಿಗಳು ಹೋಗಲಾಡಿಸಬೇಕು ಎಂದು ಹೇಳುತ್ತೇನೆ.

† ಶ್ರೀ ಸಿ. ಬೈರೇಗೌಡ (ವೇಮಗಲ್).—ಮಾನ್ಯ ಅಧ್ಯಕ್ಷರೇ. ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಆಡಳಿತ ಕುಸಿದು ಬಿದ್ದಿದೆ ಅಂತ ಏನು ಹೇಳಿದರು ಆ ಬಗ್ಗೆ ನಾನು ಸ್ಪಷ್ಟೀಕರಿಸಿ ಒಂದು ಮಾತನ್ನು ಹೇಳುತ್ತೇನೆ ಅದೇನೆಂದರೆ ಸರ್ಕಾರೀ ಹಣದಲ್ಲಿ ತಮ್ಮ ಸ್ವಾರ್ಥಕ್ಕಾಗಿ ಮುಖ್ಯ ಮಂತ್ರಿಗಳು ಪದೇ ಪದೇ ಡೆಲ್ಲಿಗೆ ಹೋಗುತ್ತಿದ್ದಾರೆ ಎಂದು ನನ್ನ ಭಾವನೆ. ಮುಖ್ಯ ಮಂತ್ರಿಗಳು ಶನಿವಾರ ಡೆಲ್ಲಿಗೆ ಹೋಗಿ ಈಗ ಬಂದಿದ್ದಾರೆ. ಯಾವ ಘನಕಾರ್ಯಕ್ಕಾಗಿ ರಾಜ್ಯದ ಯಾವ ಅಭಿವೃದ್ಧಿ ಕೆಲಸಗಳಿಗಾಗಿ ಹೋಗಿದ್ದರು? ಅವರ ಸ್ಥಾನವನ್ನು ಭದ್ರಪಡಿಸಿಕೊಳ್ಳುವುದ ಕ್ಕೋಸ್ಕರ ಸರ್ಕಾರೀ ವಿಜಾನೆಯಲ್ಲಿರುವ ಹಣವನ್ನು ಖರ್ಚುಮಾಡಿದ್ದಾರೆ ಅನ್ನುವ ಭಾವನೆ ನಮಗೆ ಬಂದಿದೆ. ಈವೊತ್ತು ಮುಖ್ಯಮಂತ್ರಿಗಳು ಡೆಲ್ಲಿಗೆ ಹೋಗಿದ್ದರು. ಅದೇರೀತಿ ಇನ್ನೊಂದಂ ದಿವಸ ಬೇರೆ ಮಂತ್ರಿಗಳೂ ಕೂಡ ಡೆಲ್ಲಿಗೆ ಹೋಗುತ್ತಾರೆ. ಆದುದರಿಂದ ಮಾನ್ಯ ಮುಖ್ಯ ಮಂತ್ರಿಗಳು ಯಾರ ಖರ್ಚಿನಲ್ಲಿ ಅವರು ಡೆಲ್ಲಿಗೆ ಕೋಗಿದ್ದರು ಎನ್ನುವುದನ್ನು ತಿಳಿಸಬೇಕು ಎಂದು ನಾನು ಕೇಳುತ್ತೇನೆ.

† ಶ್ರೀ ಡಿ. ದೇವರಾಜ ಅರಸ್ (ಮುಖ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈಗ ನಾನು ಡೆಲ್ಲಿಗೆ ಹೋಗಿದ್ದು ಎಲ್ಲರಿಗೂ ಗೊತ್ತಿದೆ ನಿನ್ನೆ ದಿವಸ ಈ ಸಭೆಯಲ್ಲಿ ಚರ್ಚೆ ನಡೆಯುವಾಗ ನಾನು ಇರಲಿಲ್ಲಾ, ಹಾಗೂ ನಮ್ಮ ಕೆಲವು ಮಂತ್ರಿಗಳ ಹೇಳಿಕೆಯನ್ನು ಪತ್ರಿಕೆಯಲ್ಲಿ ಓದಿದ್ದೇನೆ. ಅದರ ಮೇರೆ ಇಲ್ಲಿ ಬಹಳ ಚರ್ಚೆ ನಡೆಯಿತು ಎನ್ನುವುದೂ ಸಹ ಗೊತ್ತಾಯಿತು. ಮೊದಲನೆಯ ದಾಗಿ ಹೇಳಬೇಕಾದರೆ ನಾನು ಸರ್ಕಾರದ ಖರ್ಚಿನಲ್ಲಿ ಡೆಲ್ಲಿಗೆ ಹೋಗಿಲ್ಲ ಎಂದು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ ಅದಂದರಿಂದ ಮಾನ್ಯ ಸಿ. ಬೈರೇಗೌಡರು ಕೇಳಿದಂಥಾ ಪ್ರಶ್ನೆ ಉದ್ಭವಿಸುವುದಿಲ್ಲ. ಈ ಮಾತು ಹೇಳಿದರು ಅವರಿಗೆ ಸಮಾಧಾನವಾಗಿರುತ್ತದೆ ಎಂದು ನನ್ನ ಭಾವನೆ.

ಇನ್ನು ಕ್ಯಾಬಿನೆಟ್ ತೀರ್ಮಾನದ ಬಗ್ಗೆ ಹೇಳಬೇಕಾದರೆ ಅದು ಯಾವರೀತಿ ಆಗಬೇಕು, ಯಾವರೀತಿ ಬಿಡಬೇಕು ಅನ್ನುವುದಕ್ಕೆ ರೂಲ್ಸ್, ಕನ್‌ವೆನ್‌ಷನ್ಸ್ ಇವೆಲ್ಲಾ ಇವೆ. ಯಾರಾದರೂ ಮಂತ್ರಿಗಳು ನಾನು ಇರಲಿಲ್ಲ, ನನಗೆ ಗೊತ್ತಿರಲಿಲ್ಲ ಎಂದು ಈ ಬಗೆಯಾಗಿ ಹೇಳಿದರೆ it is for the Ministers concerned to act in the manner they like ಎಂದು ನಾನು ಈ ಬಗ್ಗೆ ಹಿಂದೆಯೇ ಹೇಳಿದ್ದೇನೆ. ಡಿಸಿಷನ್ whether it is formal or informal, ಇದು ಹೊಸದೇನೂ ಅಲ್ಲ. ಎಲ್ಲಾ ರಾಜ್ಯದಲ್ಲೂ ಈ ರೀತಿ ಮಾಡಿದ್ದಾರೆ, ಬ್ರಿಟಿಷ್ ಕ್ಯಾಬಿನೆಟ್ ಇದ್ದಾಗಲೂ ಈ ರೀತಿ ಇತ್ತು ಯಾವ ಕ್ಯಾಬಿನೇಟ್‌ಇರಲಿ. ಕೇಂದ್ರದ ಕ್ಯಾಬಿನೇಟ್‌ಇರಲಿ ಎಷ್ಟೋ ಸಂದರ್ಭಗಳಲ್ಲಿ ಇನ್‌ಫಾರ್ಮಲ್ ಆಗಿ ಡಿಸಿಷನ್ ತೆಗೆದುಕೊಳ್ಳುತ್ತಾರೆ. ಆದುದರಿಂದ ಇದನ್ನೇನೂ ಹೊಸದಾಗಿ ಮಾಡಿಲ್ಲ ಎಂದು ಹೇಳುತ್ತೇನೆ.

ಮಂತ್ರಿಮಂಡಲದ ತೀರ್ಮಾನವಲ್ಲ ಎಂದು ಹೇಳುವುದು ಸರಿಯಾದ ಮಾತಲ್ಲ, ಮತ್ತು ಮಂತ್ರಿಮಂಡಲದಲ್ಲಿ ಈ ಕಾರಣದಿಂದ ಯಾವ ವಿಷಯಗಳು ಸಹ ತೀರ್ಮಾನವಾಗದೆ ಉಳಿದಿಲ್ಲ. ಎಲ್ಲ ಕೆಲಸಗಳೂ ಸರಿಯಾಗಿ ನಡೆದುಕೊಂಡು ಹೋಗುತ್ತಿವೆ. ಈಗತಾನೆ ಮಾನ್ಯ ಕಾಗೋಡು ತಿಮ್ಮಪ್ಪನವರು ಹಾಗೂ ಶ್ರೀಮಾನ್ ದೇವೇಗೌಡರು ಮಾತನಾಡುವಾಗ ರಾಜ್ಯದಲ್ಲಿ ಒಂದು ರೀತಿಯಾದಂಥ ಗೊಂದಲಮಯವಿದೆ ಮತ್ತು ಸರ್ಕಾರದ ಕೆಲಸಗಳು ನಿಲ್ಲುತ್ತಿವೆ ಈ ದೃಷ್ಟಿಯಿಂದ ನಾವು ಇದನ್ನೆಲ್ಲಾ ಕೇಳುತ್ತಿದ್ದೇವೆಂದು ಹೇಳಿದರು. ಆದರೆ ಅದು ಸರಿಯಲ್ಲ, ಸರ್ಕಾರದ ಕೆಲಸ ಯಾವುದು ನಿಂತಿಲ್ಲ, ಎಲ್ಲವು ನಡೆಯುತ್ತಿವೆಯೆಂಬುದನ್ನು ನೆನ್ನೆದಿವಸ ಸಂಬಂಧಪಟ್ಟ ಮಂತ್ರಿಗಳು ಹೇಳಿದ್ದಾರೆಂದು ನಾನು ಕೇಳಿದ್ದೇನೆ. ಮತ್ತೆ ಇಲ್ಲಿ ಮಾನ್ಯ ಸದಸ್ಯರು ಕಳುಹಿಸಿರುವ ಎಲ್ಲಿ ಪ್ರಶ್ನೆಗಳಿಗೂ ಉತ್ತರಗಳು ಬರುತ್ತಿವೆ. ತಾವು ಸರ್ಕಾರಕ್ಕೆ ಕಳುಹಿಸಿಕೊಟ್ಟ 570 ಪ್ರಶ್ನೆಗಳ ಪೈಕಿ 379ಕ್ಕೆ ಉತ್ತರಗಳನ್ನು ತಮಗೆ ಕಳುಹಿಸಿಕೊಡರಾಗಿದೆ. ಸುಮಾರು 191 ಪ್ರಶ್ನೆಗಳಿಗೆ ಉತ್ತರ ಕಳುಹಿಸಬೇಕಾಗಿದೆ ಈ ಕಾರಣದಿಂದ ಸರ್ಕಾರದ ಕಾರ್ಯಕಲಾಪಗಳು ಸ್ಥಗಿತಗೊಂಡಿದೆ ಎಂಬ ಭಾವನೆ ವಾಸ್ತವಾಂಶಕ್ಕೆ ದೂರವಾದ ವಿಷಯ. ಪರಿಸ್ಥಿತಿ ಈ ರೀತಿ ಇದ್ದರೂ ಸಹ ಕೆಲವರು ಬಹಿರಂಗವಾಗಿ ಹೇಳಿಕೆ ಕೊಟ್ಟಿರತಕ್ಕಂಥ ವಿಷಯದಲ್ಲಿ ಏನು ಮಾಡಬೇಕು, ಅದನ್ನು ಯಾವ ರೀತಿ ಬಗೆಹರಿಸಬೇಕು ಎಂಬ ವಿಧಾನವನ್ನು ಸಹ ಅವರೇ ಹೇಳಿತ್ತಿದ್ದಾರೆ. ಇಷ್ಟವಿಲ್ಲದ ಮಂತ್ರಿಗಳು ಬಿಟ್ಟು ಹೋಗಬೇಕು, ಇಲ್ಲವೇ ಅಂತಹವರನ್ನು ಮುಖ್ಯಮಂತ್ರಿಯವರು ಆ ಸ್ಥಾನದಿಂದ ತೆಗೆದುಹಾಕಬೇಕು ಎಂದು ಶಿಫಾರಸ್ ಮಾಡಿದರು. ಜೊತೆಗೆ ಒಂದು ಸಂಪ್ರದಾಯ, ಒಂದು ಕನ್‌ವೆನ್‌ಷನ್ ಪ್ರಕಾರ ಅವರು ನಡೆದುಕೊಳ್ಳಬೇಕು ಮತ್ತು ನಾನೂ ಸಹ ನಡೆದುಕೊಳ್ಳಬೇಕು, ಅದು ಸಾಧ್ಯವಾಗದಿದ್ದರೆ ನೀವೇ ಅಧಿಕಾರ ಬಿಟ್ಟು ಹೋಗಿ ಎಂದು ಹೇಳಿದರು. ಅದೂ ಒಂದು ಮಾತು. ನಾನು ಅಧಿಕಾರ ಬಿಟ್ಟು ಹೋಗಬೇಕಾದರೆ ನಾನು ಜವಾಬ್ದಾರಿ ಅರಿತು ನಡೆಯಬೇಕಾಗುತ್ತದೆ. ನಾನು ನನ್ನ ಪಾರ್ಟಿಗೆ ಜವಾಬ್ದಾರನಾಗಿದ್ದೇನೆ ಕಾಂಗ್ರೆಸ್ ಲೆಜಿಸ್ಲೇಚರ್ ಪಾರ್ಟಿಗೆ ಜವಾಬ್ದಾರನಾಗಿದ್ದೇನೆ. ಆದಕಾರಣ ನಾನು ನನ್ನ ಜವಾಬ್ದಾರಿಯನ್ನು ತಿಳಿದು ನಡೆಯಬೇಕು ಈ ಮನೆಯಲ್ಲಿ ನನಗೆ ಕಾನ್‌ಫಿಡೆನ್ಸ್ ಇಲ್ಲ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ರಾಜ್ಯಾಂಗದ ಪ್ರಕಾರ ಸಭಾನಾಯಕರಿಗೆ ಅಥವಾ ಮುಖ್ಯಮಂತ್ರಿಗಳಿಗೆ ಯಾವ ರೀತಿ ಕಾನ್‌ಫಿಡೆನ್ಸ್ ಇರಬೇಕು ಎಂಬ ಬಗ್ಗೆ ರೂಲ್ಸ್ ಇದೆ. ಅದನ್ನು ತಮಗೆ ಹೇಳಬೇಕಾಗಿಲ್ಲ. ಪಾರ್ಟಿಯಲ್ಲಿ ನನಗೆ ಮೆಜಾರಿಟಿ ಇದೆಯೋ ಅಥವಾ ಇಲ್ಲವೋ ಎಂಬುದನ್ನು ತೀರ್ಮಾನ ಮಾಡಬೇಕಾದುದು ಪಾರ್ಟಿಗೇ ಬಿಟ್ಟ ವಿಚಾರ ಇಷ್ಟೇ ವಿಷಯುಗಳಿರುವುದು. ಒಟ್ಟಿನಲ್ಲಿ ಈ ವಿಷಯದ ಬಗ್ಗೆ ಒಂದು ನಿರ್ದಿಷ್ಟವಾದಂಥ ತೀರ್ಮಾನವಾಗಬೇಕು, ವಾತಾವರಣ ಅನಿರ್ದಿಷ್ಟವಾಗಿರಬಾರದೆಂಬ ವಿಷಯವನ್ನು ಒಪ್ಪುತ್ತೇನೆ, ಇದರಲ್ಲಿ ನನ್ನ ಜವಾಬ್ದಾರಿ ಏನಿದೆ ಏನು ಮಾಡಬೇಕು ಎಂಬುದನ್ನು ತಿಳಿದು ಕೊಂಡು ಮುಂದಿನ ಕೆಲಸಕಾರ್ಯಗಳನ್ನು ಮಾಡಬೇಕಾಗುತ್ತದೆ. ಈ ಸಂದರ್ಭದಲ್ಲಿ ನಾನು ಇಷ್ಟು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸಭಾಧ್ಯಕ್ಷರೆಣಿಯವರೇ, ಮಾನ್ಯ ಮುಖ್ಯಮಂತ್ರಿಗಳು ಹೇಳಿದಂಥ ವಿಷಯವೇನಿದೆ, ಆ ಬಗ್ಗೆ ಈ ಸಂದರ್ಭದಲ್ಲಿ ನಾನು ಒಂದು ವಿಷಯವನ್ನು ಸ್ಪಷ್ಟೀಕರಣ ಮಾಡಬೇಕಾಗುತ್ತದೆ. ಕ್ಯಾಬಿನೆಟ್ ತೀರ್ಮಾನದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, ಇನ್‌ಫಾರ್‌ಮರ್ ಡಿಸಿಷನ್ ಆಗುತ್ತದೆ, ಡಿಸ್‌ಕಷನ್ ಆಗುತ್ತದೆ, ಒಟ್ಟಿನಲ್ಲಿ

ಸಚಿವಸಂಪುಟದಲ್ಲಿ ನಿರ್ಣಯಗಳು ಯಾವ ರೀತಿಯಲ್ಲಿ ಆಗಬೇಕು ಎಂಬುದಕ್ಕೆ ಕೆಲವು ನಿಯಮಗಳಿವೆ, ಆ ಪ್ರಕಾರ ನಡೆದುಕೊಳ್ಳಬೇಕು, ಇಲ್ಲಿ ಮಾತ್ರವಲ್ಲ, ಬೇರೆ ಕಡೆಗಳಲ್ಲಿಯೂ ಇದೇ ರೀತಿ ನಡೆದುಕೊಂಡು ಹೋಗುತ್ತಾರೆಂದು ಹೇಳಿದರು. ಆದರೆ ಇವೊತ್ತು ನಮ್ಮ ಮುಂದಿರತಕ್ಕಂಥ ಪ್ರಶ್ನೆ ಏನೆಂದರೆ, ಸಚಿವಸಂಪುಟದಲ್ಲಿ ಅದಂಥ ತೀರ್ಮಾನದ ಬಗ್ಗೆ ಯಾವ ಮಂತ್ರಿಗಳು ಸಮಾಧಾನ ಪಟ್ಟುಕೊಳ್ಳುವುದಿಲ್ಲ. ಅಂತಹವರು ಅವರ ಇಚ್ಛೆ ಇದ್ದಂತೆ ನಡೆದುಕೊಳ್ಳಬಹುದು ಎಂದು ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆ, ಅದರಂತೆ ಅವರು ನಡೆದುಕೊಳ್ಳದಿದ್ದರೆ ಏನು ಮಾಡಬೇಕು ಎಂಬುದು ಮುಖ್ಯವಾದ ಪ್ರಶ್ನೆ.

ಇನ್ನು ಎರಡನೆಯ ವಿಷಯವೆಂದರೆ, ಒಂದು ಪಾರ್ಟಿಪದ್ಧತಿಯ ಆಡಳಿತವಿದ್ದಾಗ ಕ್ಯಾಬಿನೆಟ್ ನಡ್ನಲ್ಲಿ ಯಾವ ರೀತಿ ನಡೆದುಕೊಳ್ಳಬೇಕು ಎಂಬುದು. ಈಗಿನ ಕ್ಯಾಬಿನೆಟ್ ಸಚಿವರ ಪೈಕಿ 7-8 ಜನ ಸಚಿವರು ತಮಗೆ ಅಧಿಕಾರದಲ್ಲಿರಬೇಕೆಂಬ ವ್ಯಾಮೋಹವಿಲ್ಲ, ಆದರೆ ನಮ್ಮ ಪಾರ್ಲಿಮೆಂಟರಿ ಪದ್ಧತಿಯ ಆಡಳಿತದಲ್ಲಿ ನಾವು ಪಕ್ಷಕ್ಕೆ ಬದ್ಧರಾಗಿರಬೇಕಾಗುತ್ತದೆ, ನಮ್ಮ ಪಕ್ಷದ ಶಿಸ್ತಿಗೆ ಒಳಗಾಗಿರಬೇಕಾಗುತ್ತದೆ, ಆದಕಾರಣ ನಮ್ಮ ಪಕ್ಷದಲ್ಲಿ ನಮಗೆ ರಾಜೀನಾಮೆ ಕೊಡಲು ತೀರ್ಮಾನ ಕೊಟ್ಟಿಲ್ಲವಾದ ಕಾರಣ ನಾವು ನಮ್ಮನಿದ್ದೇವೆಯೇ ಹೊರತು, ನಮಗೇನೂ ಕುರ್ಚಿಗೆ ಅಂಟಿ ಕೊಂಡು ಕುಳಿತುಕೊಳ್ಳಬೇಕೆಂಬ ವ್ಯಾಮೋಹವಿಲ್ಲವೆಂದು ಹೇಳಿದ್ದಾರೆ ಇನ್ನು ಪಾರ್ಟಿಯಲ್ಲಿ ಇವರಿಗೆ ಬಹುಮತವಿದೆಯೇ ಅಥವಾ ಇಲ್ಲವೇ ಎಂಬುದನ್ನು ಕೇಳುವುದು ಅವರ ಪಕ್ಷಕ್ಕೇ ಸೇರಿದ್ದು. ಅದಕ್ಕೂ ನಮಗೂ ಸಂಬಂಧವಿಲ್ಲ. ಆದರೆ ಇಲ್ಲಿಯ ವಿಷಯವೇ ಬೇರೆ.

ಶ್ರೀ ಡಿ ದೇವರಾಜ ಅರಸ್.—ರಾಜ್ಯಾಂಗದ ಪ್ರಕಾರ ನಾನು ಯಾವ ರೀತಿ ನಡೆದುಕೊಳ್ಳಬೇಕೆಂಬುದು ತಮಗೆ ಗೊತ್ತಿದೆ. ನಾನು ನನ್ನ ಪಾರ್ಟಿಗೆ ಜವಾಬ್ದಾರನಾಗಿದ್ದೇನೆ. In a party system of Covernment the leader of a party has to either continue or discontinue depending upon the majority support he enjoys in the party as well as in the House. But the question of Ministers continuing or otherwise does not depend upon that. This is a well-known thing. ನನ್ನ ಒಂದು ಜವಾಬ್ದಾರಿಗೂ ಮಂತ್ರಿಗಳ ಜವಾಬ್ದಾರಿಗೂ ವ್ಯತ್ಯಾಸವಿದೆ. ಆದಕಾರಣ ಇಷ್ಟವಿಲ್ಲದವರು ಅವರಾಗಿಯೇ ಬಿಟ್ಟು ಹೋಗಬಹುದು, ಇಲ್ಲವೇ ಲೀಡರ್ ಆದವನು ಬಿಟ್ಟು ಬಿಡಿ ಎಂದು ಹೇಳಬಹುದು.

ಶ್ರೀ ಎಚ್. ಡಿ. ದೇವೇಗೌಡ—ಈ ರಾಜ್ಯದಲ್ಲಿ ನಡೆದಂಥ ಸನ್ನಿವೇಶಗಳನ್ನು ನಾವುಗಳು ನೋಡಿದ್ದೇವೆ. ಒಂದು ಕಾಲದಲ್ಲಿ ಅಂದರೆ ಕೆಲವೇ ದಿವಸಗಳ ಹಿಂದೆ ಕೆಲವರು ತಮ್ಮ ರಾಜೀನಾಮೆ ಪತ್ರಗಳನ್ನು ಪ್ರಧಾನಮಂತ್ರಿಗಳಿಗೆ ಕೊಟ್ಟಂತಹ ಉದಾಹರಣೆಗಳು ಹಲವಾರು ರಾಜ್ಯಗಳಲ್ಲಿ ನಡೆದಿದೆ ಈ ಘಟನೆಗಳನ್ನು ನಾನು ತಮ್ಮಗಮನಕ್ಕೆ ತರುತ್ತಿದ್ದೇನೆ. ನಮ್ಮ ರಾಜ್ಯದಲ್ಲಿ ಕೆಲವರು ಮಂತ್ರಿಗಳು ಏನು ಹೇಳಿದ್ದಾರೆಂದರೆ, ನಾವು ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದೇವೆ ಆದರೆ ನಾವುಗಳು ಪಕ್ಷದ ಶಿಸ್ತಿಗೆ ಒಳಗಾಗಿರುವುದರಿಂದ, ಆಲ್ಲಿ ಈ ಬಗ್ಗೆ ನಿರ್ಣಯವಾಗಬೇಕಾಗಿದೆ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದರೆ, ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, ಪಾರ್ಟಿಸಿಸ್ಟಮ್ ಆಫ್ ಗೌರ್ನಮೆಂಟ್‌ನಲ್ಲಿ ನಾಯಕರಿಗೆ ಆ ಪಾರ್ಟಿಯಲ್ಲಿ ಬಹುಮತ ಇದೆಯೋ ಅಥವಾ ಇಲ್ಲವೋ ಎಂಬುದನ್ನು ನೋಡಿಕೊಂಡು ನಿರ್ಣಯಗಳಾಗಬೇಕಾಗುತ್ತದೆಂದು ಹೇಳಿದರು. ಅದನ್ನು ನಾನು ಒಪ್ಪುತ್ತೇನೆ. ಆದರೆ ಇಂತಹ ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ ನಿಮ್ಮ ಸಚಿವ ಸಂಪುಟದ ಅನೇಕ ಜನ ಸಹೋದ್ಯೋಗಿಗಳು ಪಾರ್ಟಿಯ ಶಿಸ್ತಿಗೆ ಒಳಪಟ್ಟು ನಡೆದುಕೊಳ್ಳಬೇಕಾಗುತ್ತದೆನ್ನುವ ವಿಧಾನವನ್ನು ಅನುಸರಿಸುತ್ತಿದ್ದಾರೆ. ಈ ವಿಧಾನವನ್ನು ಅವರು ಪ್ರಾಮಾಣಿಕವಾಗಿ ಮಾಡಿರಬಹುದು, ಅಥವಾ ನಾಟಕೀಯವಾಗಿ ಮಾಡಿರಬಹುದು. ಅದರ ಬಗ್ಗೆ ನಾನು ಈಗ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಈ ಒಂದು ಪರಿಸ್ಥಿತಿಯಲ್ಲಿ ಇವನ್ನು ನಿಮ್ಮ ಪಕ್ಷಕ್ಕೆ ಸಂಬಂಧಪಟ್ಟಂತಹ ವಿಷಯ ಎಂದು ಹೇಳುವುದಕ್ಕಾಗುವುದಿಲ್ಲ. ಅವರು ಕೊಟ್ಟರತಕ್ಕಂಥ ರಾಜೀನಾಮೆ ಪತ್ರಗಳನ್ನು ಒಪ್ಪಲಿಕ್ಕೆ ನಿಮ್ಮ ಪಕ್ಷದವರು ನಿಮಗೆ ಕಳುಹಿಸಬಹುದು, ಇಲ್ಲವೇ ಅವರೇ ಇಟ್ಟುಕೊಳ್ಳಬಹುದು. ಅದು ನನಗೆ ಸಂಬಂಧಪಟ್ಟ ವಿಷಯವಲ್ಲ. ಮತ್ತು ಅದನ್ನು ಲಂಬಿಸಿ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಈಗ ನಮ್ಮ

ಮುಂದಿರುವ ಪ್ರಶ್ನೆ ಏನೆಂದರೆ. ಈ ಮಂತ್ರಿಗಳು ತಮ್ಮ ರಾಜೀನಾಮೆ ಪತ್ರಗಳನ್ನು ತಮಗೆ ಕೊಟ್ಟಿದ್ದರೆ ಅದನ್ನು ಒಪ್ಪಿಕೊಳ್ಳುವ ಅಧಿಕಾರ ತಮಗಿದೆ. ಅದು ಸಾಧ್ಯವಾಗದಿದ್ದರೆ ತಮ್ಮ ಸಚಿವಸಂಪುಟದಲ್ಲಿ ಸರಿಯಾದಂಥ ನಿರ್ಣಯಗಳಾಗುವುದಕ್ಕೆ ಸಾಧ್ಯವಿಲ್ಲ. ಈ ನಿಮ್ಮ ಸಚಿವಸಂಪುದಲ್ಲಿ ಒಂದು ದೊಡ್ಡ ಬಿರುಕು ಬಿದ್ದಿದೆ. ಇದನ್ನು ನಿಮ್ಮ ಸಹೋದ್ಯೋಗಿಗಳೇ ಕನ್‌ಫರ್ಮ್ ಮಾಡಿದ್ದಾರೆ. ಆದಕಾರಣ ಯಾವುದೇ ಒಂದು ವಿಷಯ ತೀರ್ಮಾನವಾದರೂ ಸಹ ಅದು ಸಚಿವ ಸಂಪುಟದ ತೀರ್ಮಾನವಾಗದೆ ಅದು ಕೇವಲ ಇನ್‌ಫಾರ್ಮರ್ ಡಿಸ್‌ಕಷನ್ ಆಗುತ್ತದೆ ಈ ರೀತಿಯಾಗಿ ಒಬ್ಬರೇ ಎಲ್ಲವನ್ನೂ ನಿರ್ಣಯ ಮಾಡಬಹುದೆಂದರೆ, ಹಿಂದೆ ಶ್ರೀ ಧರ್ಮವೀರರ ಕಾಲದಲ್ಲಿ ಒಬ್ಬರೇ ಎಲ್ಲವನ್ನೂ ನಿರ್ಣಯ ಮಾಡುತ್ತಿದ್ದರು. ಆದರೆ ಈಗಲೂ ಆ ರೀತಿ ಮಾಡುವುದಕ್ಕಾಗುವುದಿಲ್ಲ. ಇದರ ಬಗ್ಗೆ ಒಂದು ನಿರ್ಣಯವಾಗಬೇಕು.

ಈ ನಿರ್ಣಯವನ್ನು ನೀವೆ ಮಾಡಬೇಕಾಗುತ್ತದೆ. ಈ ದಿವಸವೇ ಇಲ್ಲಿ ಕುಳಿತುಕೊಂಡು 8 ಜನ ಮಂತ್ರಿಗಳನ್ನು ಡಿಸ್‌ಮಿಸ್ ಮಾಡಿ ಎಂದು ಹೇಳುವುದಕ್ಕಾಗುವುದಿಲ್ಲ. ಅದಕ್ಕೆ ಸ್ವಲ್ಪ ಕಾಲಾವಕಾಶಬೇಕಾಗುತ್ತದೆ. ಈ ನಿಮಿಷದಲ್ಲೇ ಅವರನ್ನು ಮಂತ್ರಿಮಂಡಲದಿಂದ ತೆಗೆಯಲು ಆರ್ಡರ್ ಕೊಡಿ ಎಂದು ಹೇಳುವುದಕ್ಕಾಗುವುದಿಲ್ಲ. ಆದರೆ ಆ ವಿಷಯ ಇಲ್ಲಿ ಇತ್ಯರ್ಥವಾಗಬೇಕು. ಅದು ನೆನೆಗುದಿಗೆ ಬಿದ್ದಿದೆ. ಈ ಸಭೆಯು ಮಂಜೂರು ಮಾಡಿದ ಹಣವನ್ನು ಖರ್ಚು ಮಾಡತಕ್ಕ ಕಾಲದಲ್ಲಿ ಕೆಲವನ್ನು ಮಂತ್ರಿಗಳು ನಿರ್ಣಯ ಮಾಡಬೇಕಾಗುತ್ತದೆ ಕೆಲವು ಕ್ಯಾಬಿನೆಟ್‌ನಿಂದ ನಿರ್ಣಯವಾಗಬೇಕು. ಕೆಲವು ಮುಖ್ಯ ಮಂತ್ರಿಗಳಿಂದ ನಿರ್ಣಯವಾಗಬೇಕು. ಮತ್ತೆ ಕೆಲವು ಸೆಕ್ರೆಟೆರಿಯಟರ ಮಟ್ಟದಲ್ಲಿ ನಿರ್ಣಯವಾಗಬೇಕು. ಇದನ್ನು ನಾನು ಮತ್ತೆ ವ್ಯಾಖ್ಯಾನ ಮಾಡಬೇಕಾದ ಅವಶ್ಯಕತೆ ಇಲ್ಲ. It was confirmed by the concerned ministers yesterday before the House. Unless this matter is finally disposed of, it is rather difficult for us to co-operate with the Government in voting of demands. I want a categorical answer from the Leader as to when this matter will be diposed of. It is a very serious matter.

SRI D. DEVARAJ URS.—I would like to know from the Chair whether the discuss on will prolong the whole day. I can only say that I am aware of the situation. Shortly I will be in a position to solve. If they say that they sholud be told when it is going to be considered, it is difficult to say. It takes some time. These are all matters which are not peculiar to one party. It is so with other political parties. Rightly or wrongly it is discussed. Most of it is party matter. The Assembly is concerned with the proceedings of the Government work. So far as that is concerned, everybody is agreed and I have stated and the ministers, I am told, have stated that the Government work is not stopped. It becomes the concern of the Assembly if Government work is stopped. This is a matter which I am going to deal with, not in two months or 20 days, but shortly. ನ್ಯೂನಗಿತೆಗೊಂಡಿರತಕ್ಕದ್ದು ಏನೂ ಇಲ್ಲ. ಈ ವಿಚಾರವನ್ನು ಲಂಬಿಸಿದರೆ ಏನಾಗುತ್ತದೆ ಎಂದರೆ ಜನತಾ ಪಕ್ಷವಾಗಲೀ ಕಾಂಗ್ರೆಸ್ ಪಕ್ಷವಾಗಲಿ ಯಾವುದೇ ಪಕ್ಷವಾಗಲೀ ಕೆಲಸ ಮಾಡುವುದು ಕಷ್ಟವಾಗುತ್ತದೆ. ಈಗ ಕೇಂದ್ರದಲ್ಲಿ 20 ಜನ ಮಂತ್ರಿಗಳನ್ನು ಮಾತ್ರ ಮಾಡಿದ್ದಾರೆ. ಇನ್ನೂ ಕೆಲವು ಮಂತ್ರಿಗಳ ನೇಮಕವನ್ನು ಮಾಡಿಲ್ಲ. ಹಾಗಾದರೆ ಇದೂ ಒಂದು ದೊಡ್ಡ ಇಷ್ಯೂನೇ ಆಗುತ್ತದೆ. ಈಗ ಚುನಾವಣೆಯಾಗಿರುವ ರಾಜ್ಯದಲ್ಲಿ ಮುಖ್ಯ ಮಂತ್ರಿಗಳ ಚುನಾವಣೆಯಾಗಬೇಕು ಎಷ್ಟೋ ಗೊಂದಲಗಳು ಇರುತ್ತವೆ. ಈಗ ಮಾನ್ಯ ಸದಸ್ಯರು ಹೇಳಿದ್ದೆಲ್ಲವನ್ನೂ ನಾನು ಗಮನಿಸಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮುಖ್ಯ ಮಂತ್ರಿಗಳು ಈ ಸದನದಲ್ಲಿ ಎಲ್ಲರಿಗಿಂತಲೂ ಹಿರಿಯರೂ, ಮತ್ತು ಅನುಭವದಲ್ಲಿಯೂ ಹಿರಿಯರೂ ಇದ್ದಾರೆ. ನವುಗಿಂತ ಹೆಚ್ಚು ಅನುಭವ ವನ್ನು ಪಡೆದಿರುವವರಿದ್ದಾರೆ. ಅವರು ಯಾವುದೇ ಸಂದರ್ಭದಲ್ಲಿಯೂ ಕೂಡ ಪಕ್ಷೇತರ ಸದಸ್ಯ ರಾಗಿ ಕೆಲಸ ಮಾಡಿಲ್ಲ. ಅವರು ಕಾಂಗ್ರೆಸ್ ಪಕ್ಷದಲ್ಲಿಯೇ ಇದ್ದುಕೊಂಡು ಕೆಲಸ ಮಾಡಿಕೊಂಡು ಬಂದಿದ್ದಾರೆ. ಇಂಥಾ ಒಂದು ಪರಿಸ್ಥಿತಿ ಪಕ್ಷದ ರಾಜಕಾರಣದಲ್ಲಿ ಈಗ 30 ವರ್ಷಗಳ ಇತಿಹಾಸ ದಲ್ಲಿ ಬಂದಿಹಾಗೆ ಕಾಣಲಿಲ್ಲ. ಇದು ಪಕ್ಷದ ಸಮಸ್ಯೆಯಾಗಿ ಉಳಿದಿಲ್ಲ. ಇದು ಪಕ್ಷದ ಸಮ ಸ್ಯೆಯೂ ಅಲ್ಲ. ಇವೊತ್ತು ಸರ್ಕಾರದ ಆಡಳಿತ ಯಾವ ರೀತಿ ನಡೆಯುವುದಕ್ಕೂ ಗೊಂದಲ ಇದೆ. ಪ್ರಮುಖವಾಗಿ ಪಕ್ಷದ ಸಮಸ್ಯೆ ಕಳೆದ 3 ವರ್ಷಗಳಿಂದ ಹತ್ತಾರು ಸಾರಿ ಮಾನ್ಯ ಮುಖ್ಯ ಮಂತ್ರಿಗಳ ಬಗ್ಗೆ ಸಮರ್ಥನೆ ಮಾಡುತ್ತಾ ಅನೇಕ ಜನ ನಾಯಕರನ್ನು ತೆಗೆಯಬೇಕು ಎಂದು ಪಕ್ಷದ ವರಿಷ್ಠರ ಹತ್ತಿರಕ್ಕೆ ದಂಡಯಾತ್ರೆಯನ್ನು ನಡೆಸಿದ್ದಾರೆ. ಆ ವಿಷಯವನ್ನು ನಾವು ಇಲ್ಲಿ ಚರ್ಚೆ ಮಾಡಿಲ್ಲ. ಮಂತ್ರಿಮಂಡಲದಲ್ಲಿ ಅದಲು ಬದಲು ಆಗಿರಬಹುದು. ಅದು ನಮಗೆ ಸಂಬಂಧ ಇಲ್ಲ. ಅದು ಪಾರ್ಟಿ ವಿಷಯ ಆದರೆ ಇವೊತ್ತು ಈ ಸದನದ ಮುಂದೆ ರಾಜ್ಯದ ಆಡಳಿತದ ಪರಿಸ್ಥಿತಿಯ ಬಗ್ಗೆ ಒಂದು ವಿಷಾದ ಎದ್ದಿದೆ.

ಅಧ್ಯಕ್ಷರು.—ಆಡಳಿತ ಕೆಟ್ಟಿಲ್ಲ ಎಂದು ನಿನ್ನೆಯೂ ಹೇಳಿದ್ದಾರೆ. ಇವೊತ್ತೂ ಮುಖ್ಯ ಮಂ ್ರಿಗಳು ಹೇಳಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಖಾಯಿಲೆಯಿಂದ ಮಲಗಿ ನನಗೆ ಯಾವ ರೋಗವೂ ಇಲ್ಲ ಎಂದು ಹೇಳಿದ ಹಾಗಾಯಿತು.

ಶ್ರೀ ಎಚ್. ಡಿ. ದೇವೇಗೌಡ.—ಈ ಮಾನ್ಯ ಸಭೆಯು ಮಂಜೂರು ಮಾಡಿದಂತಹ ಹಣ ಏನಿದೆ ಅದನ್ನು ಯಾವ ಯಾವ ಹಂತದಲ್ಲಿ ಯಾವ ರೀತಿ ಖರ್ಚು ಮಾಡಬೇಕು ಎಂಬುದನ್ನು ಸರ್ಕಾರ ನಿರ್ಧಾರ ಮಾಡಬೇಕಾಗುತ್ತದೆ. ಅದನ್ನು ಕಾರ್ಯದರ್ಶಿಯವರು ನಿರ್ಧಾರ ಮಾಡುವುದ ಕ್ಕಾಗುವುದಿಲ್ಲ. ಈ ಸಭೆ ಮಂಜೂರು ಮಾಡಿದಂತಹ ಹಣವನ್ನು ಖರ್ಚು ಮಾಡುವ ಬಗ್ಗೆ ವಿವಿಧ ಹಂತದಲ್ಲಿ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ. ಈಗ ಹೊಸದಾಗಿ ಒಂದು ಆಗ್ರಿಕಲ್‌ಚರಲ್ ಯೂನಿವರ್ಸಿಟಿ ಮಾಡಬೇಕು, ಅದಕ್ಕೆ ಬೇಕಾದ ದುಡ್ಡು ಖರ್ಚು ಮಾಡಬೇಕಾದರೆ ಅದನ್ನು ಸಚಿವರ ಸಂಪುಟದಲ್ಲಿ ಮಂಜೂರಾತಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಇವೊತ್ತು ಆಗ್ರಿ ಕಲ್‌ಚರಲ್ ಡಿಮ್ಯಾಂಡ್ ನಮ್ಮ ಮುಂದೆ ಇದೆ. ಈ ಒಂದು ಪರಿಸ್ಥಿತಿಯಲ್ಲಿ ಸರ್ಕಾರ ಇವೊತ್ತು ಸಾವರನ್ಯದಿಂದ ನಡೆಯುವುದಕ್ಕೆ ಸಾಧ್ಯವಿಲ್ಲದೆ ಇರುವುದರಿಂದ ಆಡಳಿತದ ಮೇಲೆ ದುಷ್ಪರಿಣಾಮ ಬೀರಿದೆ ಎಂದು ನನ್ನ ಸ್ಪಷ್ಟವಾದ ಅಭಿಪ್ರಾಯ. ಆದ್ದರಿಂದ ಈ ಬಗ್ಗೆ ಇವೊತ್ತು ಅಂತಿಮವಾಗಿ ನಿರ್ಣಯವಾಗಬೇಕು ಎಂದು ನಾನು ಹೇಳುತ್ತೇನೆ.

† SRI S. BANGARAPPA (Sorab).—On a point of order. You have admitted notice under rule 312. The scope of discussion under this rule is limited. It says :

> * A member who wishes to bring to the notice of the Assembly any matter which is not a point of order shall give notice to the Secretary in writing stating briefly the point which he wishes to raise in the Assembly together with reasons for wishing to raise it and he shall be permitted to raise it only after the Speaker has given his consent and at such time and date as the Speaker may fix".

The Chair gave consent yesterday and time also was allowed and the entire House was seized of this matter. The rule does not state whether this is a motion or resolution, what is the course that the House should adopt. It is silent on this

matter. Therefore, I would like to appeal to you that this is only a matter to be raised and there is no motion or resolution to be adopted by the House. All those matters that are covered or touched by the Hon'ble. Leader of the Opposition have been sufficiently met in the reply advanced by the Hon Leader of the House. Therefore, I submit that the only course left open to the Chair is to stop discussion at this stage.

MADAM SPEAKER.—I entirely agree with the hon'ble member.

ಈ ವಿಷಯದಲ್ಲಿ ತೀರ್ಮಾನ ತೆಗೆದುಕೊಳ್ಳುವುದು ಏನೂ ಇಲ್ಲ. ಮಾನ್ಯ ವಿರೋಧಪಕ್ಷದ ನಾಯಕರು ವಿಷಯವನ್ನು ಎತ್ತಿದ್ದಾರೆ. ಅದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ.

3-00 ಪಿ. ಎಂ.

ಶ್ರೀ ಕಾಗೋಡು ತಿಮ್ಮಪ್ಪ.—ಈ ಮಧ್ಯದಲ್ಲಿ ಮಾನ್ಯ ಬಂಗಾರಪ್ಪನವರು ಬಲವಾದಂಥ ವಾದ ಮಾಡಿದ್ದಾರೆ.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರು ವಾದ ಮಾಡಲಲ್ಲ, ಇರುವ ವಿಷಯವನ್ನು ಹೇಳಿದ್ದಾರೆ

ಶ್ರೀ ಕಾಗೋಡು ತಿಮ್ಮಪ್ಪ.—ನಾವು ಹೇಳುವುದಿಷ್ಟೆ. ಒಂದು ಮಾತನ್ನು ಮಾನ್ಯ ಮುಖ್ಯ ಮಂತ್ರಿಗಳು ಒಪ್ಪಿದ್ದಾರೆ.....

SRI D. B. KALAMANKAR.—Madam Speaker, how long will this go on ? The Hon'ble Chief Minister has explained and made the position very clear.

ಶ್ರೀ ಕಾಗೋಡು ತಿಮ್ಮಪ್ಪ.—ಈ ಬಗ್ಗೆ ತೀರ್ಮಾನ ಆದರೆ ಅವರಿಗೆ ಮಂತ್ರಿ ಪದವಿ ಸಿಕ್ಕುತ್ತದೆ ಎನ್ನುವ ಆಸೆ ಇದೆ.

ಶ್ರೀ ಡಿ. ದೇವರಾಜ ಅರಸ್.—ಯಾವಾಗ ಎನ್ನುವುದು ಈ ಸಭೆಯಲ್ಲಿ ಅಲ್ಲ ನಿರ್ಣಯವಾಗುವುದು. That is my responsibility. As a Leader I have to think about it. ನಿಮ್ಮಲ್ಲಿ ಯಾವಾಗ ಏನು ಮಾಡುತ್ತೀರಿ ಎಂದು ನಾವು ಕೇಳುತ್ತಿವೆಯೇ ?

ಶ್ರೀ ಕಾಗೋಡು ತಿಮ್ಮಪ್ಪ.—ನಾವು ನಿಮ್ಮನ್ನು ಕೇಳಬೇಕಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್ —ಎಲ್ಲೂ ಇಲ್ಲದ ವ್ಯವಹಾರ ಮಾಡುತ್ತೀರಿ. 8 ಗಂಟೆಗೆ, 6 ಗಂಟೆಗೆ, 3 ಗಂಟೆಗೆ ತೀರ್ಮಾನ ಮಾಡುತ್ತೇನೆ ಎಂದು ಹೇಳುವುದಕ್ಕೆ ಆಗುತ್ತದೆಯೇ ?

ಶ್ರೀ ಎಚ್. ಡಿ. ದೇವೇಗೌಡ.—ತೀರ್ಮಾನ ಮಾಡುವುದಕ್ಕೆ ಒಂದು ವರ್ಷ ತೆಗೆದುಕೊಳ್ಳಬಹುದು.

SRI D. DEVARAJ URS.—It is my responsibility. I will take the consequences I will stay or quit-it is left to me.

ಶ್ರೀ ಕಾಗೋಡು ತಿಮ್ಮಪ್ಪ.—ಇದನ್ನೆಲ್ಲಾ ಹೇಳುತ್ತಿರುವುದು ಏಕೆಂದರೆ ನಾವು ಕೊಡುವ ಹಣ ಸರಿಯಾದ ರೀತಿಯಲ್ಲಿ ವ್ಯಯವಾಗಬೇಕು.

ಶ್ರೀ ಡಿ. ದೇವರಾಜ ಅರಸ್.—ನೀವು ಕೊಡುವ ಹಣಕ್ಕೂ ಇದಕ್ಕೂ ಏನೂ ಸಂಬಂಧವಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಇದರ ಬಗ್ಗೆ ನಿರ್ಣಯ ತೆಗೆದುಕೊಳ್ಳುವುದಕ್ಕೆ ಒಂದು ವರ್ಷ ತೆಗೆದುಕೊಳ್ಳಬಹುದು. ಮಾನ್ಯ ಮುಖ್ಯ ಮಂತ್ರಿಗಳು ಇವತ್ತೂ ಈ ಪರಿಸ್ಥಿತಿಯಿಂದ ಪಾರಾಗಬೇಕು ಎನ್ನುವುದಾದರೆ.....

ಶ್ರೀ ಎಚ್. ಡಿ. ದೇವೇಗೌಡ.—ಅಧ್ಯಕ್ಷರು ದಯಮಾಡಿ ಕ್ಷಮಿಸಬೇಕು. ಏಕೆಂದರೆ, ನಾವು ಈ ವಿಷಯದಲ್ಲಿ ಮುಂದುವರೆಸಬೇಕಾಗುತ್ತದೆ. ಇವತ್ತು ಯಾರೇ ಸಚಿವರು ಸರ್ಕಾರದ ಹಣವನ್ನು ತೆಗೆದುಕೊಂಡು ಕೆಲಸ ಮಾಡುತ್ತಾರೆ ಅದು ಪಾರ್ಟಿ ಹಣ ಅಲ್ಲ.

SRI KAGODU THIMMAPPA.—The money that has to be noted does not belong to the Congress Party. Everybody is concerned with it.

SRI D. B. KALMANKAR.—We are all responsible people.

ಶ್ರೀ ಎಚ್ ಡಿ ದೇವೇಗೌಡ.—ವಿಪ್ ಸರಿಯಾಗಿ ಕೆಲಸ ಮಾಡುವುದಿಲ್ಲ. ಅವರಿಗೂ ನಾವು ಈ ನಭೆಯಿಂದ ಸಂಬಳವನ್ನು ಕೊಡುತ್ತೇವೆ; ಕಾಂಗ್ರೆಸ್ ಪಾರ್ಟಿ ಫಂಡ್‌ನಿಂದ ಕೊಡುವುದಿಲ್ಲ. ಅದನ್ನು ಹೇಳುವುದಕ್ಕೂ ಅಧಿಕಾರವಿಲ್ಲ ಎಂದು ಹೇಳಬಹುದಲ್ಲ.

SRI D. DEVARAJ URS.—You have a right to pass or oppose every Demand.

ಶ್ರೀ ಎಚ್. ಡಿ. ದೇವೇಗೌಡ.—ಡಿಮ್ಯಾಂಡ್‌ಗಳನ್ನು ತೆಗೆದುಕೊಳ್ಳುವುದಕ್ಕಿಂತ ಮುಂಚೆ ಈ ವಿಷಯದಲ್ಲಿ ನಿರ್ಣಯವಾಗಬೇಕು ಎಂದು ನಾನು ಹೇಳಿದ್ದೇನೇ ಹೊರತು, ಈ ದಿನವೇ, ಈ ನಿಮಿಷದಲ್ಲೇ ಮಾಡಿ ಎಂದು ಹೇಳಲಿಲ್ಲ. ಏಕೆಂದರೆ ಇದು ಸರ್ಕಾರದ ಹಣ.

ಅಧ್ಯಕ್ಷರು.—ನಿನ್ನೆಯಿಂದ ಇವತ್ತಿನವರೆಗೂ ಈ ವಿಚಾರದಲ್ಲಿ ಮಾತನಾಡಿದಿರಿ. ಅದರ ಬಗ್ಗೆ ನಿರ್ಣಯ ತೆಗೆದುಕೊಳ್ಳುತ್ತೇನೆ ಎಂದು ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಅದರ ಜವಾಬ್ದಾರಿ ತೆಗೆದುಕೊಂಡಿದ್ದಾರೆ. ಇಪತ್ತಿನದಿವಸವೇ, ಈ ಘಳಿಗೆಯಲ್ಲೇ, ಈ ನಿಮಿಷದಲ್ಲೇ, ಈ ಸೆಕೆಂಡಿನಲ್ಲೇ ಮಾಡುತ್ತೀರಾ ಎಂದರೆ ಆಗುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.— ಹಾಗೆ ನಾವು ಹೇಳಲಿಲ್ಲ.

ಅಧ್ಯಕ್ಷರು.—ಹಾಗೆ ಮಾಡುವುದಕ್ಕೂ ಆಗುವುದಿಲ್ಲ, ಸಾಧ್ಯವಾಗುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಇದನ್ನು ತೀರ್ಮಾನ ಮಾಡುವುದಕ್ಕೆ 3 ದಿವಸವೋ, 4 ದಿವಸವೋ, 6 ದಿವಸವೋ ತೆಗೆದುಕೊಳ್ಳುತ್ತೇನೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಲಿ.

ಶ್ರೀ ಎಸ್. ಪೈ, ಪಾಟೀಲ್.—ನಾನು ಭಾಷಣ ಮಾಡಲಿಕ್ಕೆ ಹೋಗುವುದಿಲ್ಲ. ಸರ್ಕಾರಿ ಜವಾಬ್ದಾರಿ ಇದೆ ಎಂದರೆ ನಿಮ್ಮ ಪಕ್ಷ ಮೆಜಾರಿಟಿ ಇದ್ದಾಕ್ಷಣಕ್ಕೆ ಬರೀ ನಿಮ್ಮದೇ ಜವಾಬ್ದಾರಿ ಅಲ್ಲ.

ಶ್ರೀ ಕೆ ಎಚ್. ಪಾಟೀಲ್.—ನಿನ್ನೆಯ ಇಡೀ ದಿವಸದ ಪ್ರೊಸೀಡಿಂಗ್ಸ್‌ನ್ನು ನೋಡಿದರೆ, ನಿನ್ನೆ ಮಾನ್ಯ ವಿರೋಧಪಕ್ಷದ ನಾಯಕರು ಈ ವಿಷಯಗಳನ್ನು ಎತ್ತಿದಾಗ ಅಧಿಕೃತವಾಗಿ ಅದಕ್ಕೆ ಉತ್ತರ ಕೊಡತಕ್ಕವರು ಯಾರು ಇರಲಿಲ್ಲ. ಇವತ್ತಿನದಿವಸ ಸಭಾ ನಾಯಕರು ಬಂದಿದ್ದಾರೆ. ನಿನ್ನೆಯ ದಿವಸ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇನ್ನಿತರ ಸ್ನೇಹಿತರು ಏನು ವಿಷಯಗಳನ್ನು ಪ್ರಸ್ತಾಪ ಮಾಡಿದರು ಅದು ಪತ್ರಿಕೆಗಳಲ್ಲಿ ಬಂದಿದೆ. ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಯಾವ ನಿಲುವನ್ನು ತೆಗೆದುಕೊಳ್ಳುತ್ತಾರೆ ಎಂಬುದನ್ನು ಖಚಿತವಾಗಿ ಹೇಳಿದ್ದಾರೆ; ಮತ್ತು ಇಷ್ಟರಲ್ಲೇ ಇದರ ಬಗ್ಗೆ ನಿಲುವನ್ನು ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಹಾಗೆ ಮಾನ್ಯ ಮುಖ್ಯ ಮಂತ್ರಿಗಳು ಹೇಳಲಿಲ್ಲ.

ಶ್ರೀ ಎಚ್. ಡಿ ದೇವೇಗೌಡ.—ಅದರ ಬಗ್ಗೆ ನನಗೆ ಭಿನ್ನಾಭಿಪ್ರಾಯವಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದಾರೆ. ನಾನು ಹೇಳುವುದಿಷ್ಟೆ. ಈ ವಿಷಯ ತೀರ್ಮಾನವಾಗಬೇಕಾದರೆ, ಅದಕ್ಕೆ ಎಷ್ಟು ಕಾಲ ಬೇಕಾಗುತ್ತದೆ ಎನ್ನುವುದನ್ನು ದಯಮಾಡಿ ಹೇಳಲಿ. ಏಕೆಂದರೆ, ಮಾನ್ಯ ಮಂತ್ರಿಗಳಿಗೆ ಕೊಡುವ ಪಗಾರಕ್ಕೆ ನಾವು ಓಟು ಮಾಡಬೇಕಾಗುತ್ತದೆ. ಮಾನ್ಯ ಚಿಕ್ಕೇಗೌಡರ ಪಗಾರಕ್ಕೆ ನಾವು ಓಟು ಮಾಡಬೇಕಾಗುತ್ತದೆ. ಇವತ್ತು ಸಚಿವರುಗಳು ತಮ್ಮ ಜವಾಬ್ದಾರಿಯನ್ನು ನಿರ್ವಹಣೆ ಮಾಡು

ವಾಗ, ಇದು ಕ್ಯಾಬಿನೆಟ್ ತೀರ್ಮಾನ ಅಲ್ಲ, ಒಬ್ಬರು ಉಂಟು, ಒಬ್ಬರು ಇಲ್ಲ ಎಂದು ಹೇಳುವಾಗ ಇವತ್ತು ಈ ಸದನ ಮುಂಜೂರಾತಿ ಮಾಡಿದಂಥ ಹಣದ ವ್ಯಯ ಸರಿಯಾದ ಕ್ರಮದಲ್ಲಿ ಆಗುತ್ತದೆಯೇ ಎನ್ನುವುದರಲ್ಲಿ ಸಂಶಯವಿದೆ. ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಆಶ್ವಾಸನೆ ಕೊಡಬೇಕಾಗಿರುವುದು. ಏನೆಂದರೆ, ಇದರ ಬಗ್ಗೆ ಅಂತಿಮ ತೀರ್ಮಾನ ಮಾಡುವುದಕ್ಕೆ ಒಂದು ವಾರವೋ, ಒಂದು ತಿಂಗಳೋ, 15 ದಿವಸವೋ ಅಥವಾ 3 ದಿವಸವೋ ಬೇಕಾಗುತ್ತದೆ ಎನ್ನುವುದನ್ನು ಹೇಳಬೇಕು. ನಾನು ಆನ್ ರೀಸನಾಬರ್ ಆಗಿ ಮಾಡುತ್ತಿಲ್ಲ. ಇದನ್ನು ಮಾನ್ಯ ಮುಖ್ಯ ಮಂತ್ರಿಗಳು ಕೂಡ ಒಪ್ಪಿಕೊಳ್ಳುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಇದೇ ಅಧಿವೇಶನದಲ್ಲಿ ತೀರ್ಮಾನ ಮಾಡುತ್ತಾರೆಯೋ ಎನ್ನುವುದನ್ನು ಹೇಳಬೇಕು. ಏಕೆಂದರೆ, ನಾವು ಹಣ ಕೊಡಬೇಕಾಗುತ್ತದೆ. ಏಕೆಂದರೆ, ಸಚಿವಸಂಪುಟದಲ್ಲಿ ತೆಗೆದುಕೊಳ್ಳಬಹುದಾದಂಥ ನಿರ್ಣಯಗಳಲ್ಲಿ ಈ ರೀತಿ ಒಬ್ಬರಿಗೊಬ್ಬರಿಗೆ ಭಿನ್ನಾಭಿಪ್ರಾಯಗಳಿದ್ದು, ಕೆಲವು ಕಾರ್ಯಗಳು ನಿಂತು ಹೋದಾಗ ಅದರಿಂದ ಆಗತಕ್ಕಂಥ ಅನಾಹುತಗಳಿಗೆ ಅವರು ಜವಾಬ್ದಾರರು.

ಅಧ್ಯಕ್ಷರು — ಆ ರೀತಿ ಆಗುವುದಕ್ಕೆ ಬಿಡುವುದಿಲ್ಲ ಎಂದು ಮುಖ್ಯ ಮಂತ್ರಿಗಳು ಹೇಳಿದ್ದಾರೆ

SRI H. N. NANJE GOWDA.—I rise to a point of Order. The hon the Leader of the Opposition has raised a discussion under Rule 312. While I was listening to him since yesterday, actually he is discussing the conduct of Ministers, the Chief Minister and the entire Ministry, I thought he is speaking on a 'No-confidence' motion under Rule 153. Under Rule 312, there is some limitation for any discussion. If he wants to say that the Government is not functioning properly and that they have no confidence in the Ministry, let him bring a Motion of 'No-confidence' and if he gets the majority then he can take up and discuss. I would like to draw your kind attention, Madam Speaker, to Rule 288 (viii).

Under rule 288(8), the Hon'ble Leader of the Opposition cannot use his right for the purpose of obstructing the business of the House. Under the guide of rule 312 what is happening since yesterday is, the business of the Assembly is being obstructed. That is not the scope of this rule. Therefore he is not within the limits of rule 312. He is exceeding the limit. He cannot direct the Chief Minister to do things in a particular way. If he so wants, he can bring a no confidence motion and discuss it on the floor of this House and under that motion, he can say that he is not functioning properly. I am sorry to say that under rule 312, the scope is being misused by my friends. Let us stop the discussion at this stage.

SRI H. D. DEVE GOWDA —I may inform the House that Sri Nanjegowda had stalled the proceedings of this house for days together without quoting any rule.

ಅಧ್ಯಕ್ಷರು.—ಯಾರೋ ಏನೋ ಯಾವಾಗಲೋ ತಪ್ಪು ಮಾಡಿದರೆ ಅದರಂತೆ ಈಗ ಎಲ್ಲರೂ ಎಲ್ಲಾ ಕಾಲದಲ್ಲೂ ತಪ್ಪು ಮಾಡುವುದಕ್ಕಾಗುವುದಿಲ್ಲ. ಸೆಕ್ಷನ್ 312ರ ಪ್ರಕಾರ ಈಗಾಗಲೇ ಜಡ್ಜ್ ಆಯಿತು. ಶ್ರೀ ಎಚ್. ಎನ್. ನಂಜೇಗೌಡರು ಹಾಗೂ ಶ್ರೀ ಎಸ್. ಬಂಗಾರಪ್ಪನವರು ಮಾತನಾಡಿದ್ದೂ ಆಯಿತು. ಅದಕ್ಕೆ ಜವಾಬು ಕೊಟ್ಟಿದ್ದೂ ಆಯಿತು.

ಶ್ರೀ ಕೆ. ಪುಟ್ಟಸ್ವಾಮಿ.—ನನ್ನ ಒಂದು ಅರಿಕೆ ಏನೆಂದರೆ, ಶ್ರೀಮಾನ್ ನಂಜೇಗೌಡರು, ಹಾಗೂ ಶ್ರೀಮಾನ್ ಬಂಗಾರಪ್ಪನವರು ಹೇಳಿದ್ದರಲ್ಲಿ ನನ್ನದೇನೂ ಅಕ್ಷೇಪಣೆ ಇಲ್ಲ. ಅವರು ಸರಿಯಾಗಿ ಹೇಳಿದ್ದಾರೆ. ಅದರಲ್ಲಿ ಸತ್ಯಾಂತ ಇಲ್ಲವೆಂದು ಹೇಳುತ್ತಿಲ್ಲ. ಬಲ ಇಲ್ಲವೆಂದು ಹೇಳುತ್ತಿಲ್ಲ ಕ್ರಯಾಲೋಪಗಳಿಂದ ರಕ್ಷಣೆ ಪಡೆದುಕೊಳ್ಳಲು ಕೆಲವಾರು ಅಂಶಗಳನ್ನು ತಮ್ಮ ಗಮನಕ್ಕೆ ತರುವುದಕ್ಕೆ ಅಪೇಕ್ಷೆ ಪಡುತ್ತೇನೆ. ಈ ಪ್ರಸ್ತಾವನೆಗೆ ನಾನೂ ಸಹ ರುಜುಮಾಡಿದ್ದೇನೆ. ಮೊನ್ನೆಯಿಂದ ನಾನು ಈ ವಿಚಾರವಾಗಿ ಬಾಯಿಬಿಟ್ಟಿಲ್ಲ. ಆದ್ದರಿಂದ ನನಗೆ ಮಾತನಾಡಲು ಇನ್ನೂ ಅವಕಾಶ ಇದೆಯೆಂದು ತಿಳಿದು ಈಗ ತಾವು ಅವಕಾಶ ಕೊಟ್ಟರೆ ಮಾತನಾಡುತ್ತೇನೆ. ತಾವು ಈ ಪ್ರಸ್ತಾವನೆಯಲ್ಲ ಪುನಃ ನಾನು ಮಾತನಾಡುವುದು ಬೇಡವೆಂದು ಹೇಳಿದರೆ ತಮ್ಮ ಅಭಿಪ್ರಾಯದ ವಿರುದ್ಧವಾಗಿ ನಾನು ಹೋಗಲು ಅಪೇಕ್ಷೆ ಇಲ್ಲವೆಂದು ನಾನು ಭಾವನೆ ಮಾಡಿಕೊಂಡಿದ್ದೇನೆ. ಆ ಒಂದು ನೋಡನೆಗೆ ನಾನೂ ಕೂಡ ರುಜುಮಾಡಿದ್ದೇನೆ.

ಅಧ್ಯಕ್ಷರು.—ಈ ಪ್ರಸ್ತಾವನೆಯಲ್ಲಿ ಬಹಳ ಜನರು ರುಜುಮಾಡಿದ್ದಾರೆ. ಅವರೆಲ್ಲರ ಭಾಷಣವನ್ನು ಶ್ರೀಮಾನ್ ದೇವೇಗೌಡರು ಒಬ್ಬರೇ ಮಾಡಿದ್ದಾರೆಂದು ನನ್ನ ಅಭಿಪ್ರಾಯ. ಎಲ್ಲರೂ ಹೇಳುವುದನ್ನೆಲ್ಲಾ ಅವರೇ ಹೇಳಿಬಿಟ್ಟಿದ್ದಾರೆ. ಶ್ರೀ ಪುಟ್ಟಸ್ವಾಮಿಯವರೇ, ತಾವು ಹಿರಿಯ ಸದಸ್ಯರು, ನಿನ್ನೆಯಿಂದ ಈ ಸಭೆಯಲ್ಲಿ ಬಿಜಿನೆಸ್ ಏನೂ ಆಗಿಲ್ಲ. ಇವತ್ತೆಲ್ಲಾ ಅದನ್ನೇ ಮಾತನಾಡಿದ್ದಾಗಿದೆ. ಇವತ್ತೂ ಸಹ ಇದೇ ವಿಚಾರವನ್ನು ಮುಂದೂಡಿದರೆ ಹೇಗೆ ?

ಶ್ರೀ ಎಚ್. ಡಿ. ದೇವೇಗೌಡ.—ಅದಕ್ಕೆ ಯಾರು ಜವಾಬ್ದಾರರು ? ನಾನು ಬಿಜಿನೆಸ್ ಮಾಡಬಾರದು ಎಂದು ಹೇಳಲಲ್ಲ. ದಯಮಾಡಿ ಆ ರೀತಿ ಅಕ್ಷೇಪಣೆ ಮಾಡಬೇಡಿ.

ಅಧ್ಯಕ್ಷರು.—ನಾನು ಯಾವಾಗಲೂ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಈ ಸಭೆಯಲ್ಲ ನಿರ್ಣಯ ಮಾಡುವುದಿಲ್ಲ, ಸೆಕ್ಷನ್ 312ರ ಕೆಳಗೆ ಇದನ್ನು ಈಕ್ಸೆಪ್ಟ್ ಮಾಡಿದರೆ ಹೇಗೆ ? ನಮಗೆ ಮಾನ್ಯ ಮುಖ್ಯಮಂತ್ರಿಯವರಿಂದ ಇದಕ್ಕೆ ಉತ್ತರ ಬೇಕು.

SRI D. DEVARAJ URS.—I have already said that I would take a decision shortly one way or the other. ಇದಕ್ಕಿಂತ ಹೆಚ್ಚಿಗೆ ನಾನು ಏನೂ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಈ ಅಧಿವೇಶನ ಮುಗಿಯುವುದೊರಳಗೆ ಅದರ ಬಗ್ಗೆ ನಿರ್ಣಯ ತೆಗೆದುಕೊಳ್ಳುತ್ತೀರಾ ?

ಶ್ರೀ ಡಿ. ದೇವರಾಜ ಅರಸು.—ಆಗಬಹುದು. ಅದರ ಬಗ್ಗೆ ನನ್ನ ತಕರಾರು ಏನೂ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ನಾವು ಆ ಕಡೆ ಹೋದರೆ ನೀವು ಹೇಳುವುದು ಯಾರಿಗೆ ?

(ಆಡಳಿತ ಪಕ್ಷದ ಅನೇಕ ಸದಸ್ಯರು ಹೊರಗೆ ಹೋಗಲು ಪ್ರಾರಂಭಿಸಿದರು)

ಶ್ರೀ ಟಿ. ಎಂ. ಮಂಜುನಾಥ.—ಈ ಸಭೆಯಿಂದ ಈಗ ಹೊರಗೆ ಹೋಗುತ್ತಿರುವ ಆಡಳಿತ ಪಕ್ಷದ ಪದಸ್ಯರಿಗೆ ಈ ಹಣದ ಬೇಡಿಕೆ ಬಗ್ಗೆ ಇಷ್ಟೆ ಇಲ್ಲವೆಂದು ನನಗೆ ಕಾಣುತ್ತದೆ. ಯಾರು ರಾಜೀನಾಮೆ ಕೊಡುತ್ತಾರೆ, ಯಾರು ಮಂತ್ರಿಗಳಾಗುತ್ತಾರೆ ಎಂಬುದು ಅವರಿಗೆ ಈಗ ಬೇಕಾಗಿರುವುದು

ಅಧ್ಯಕ್ಷರು.—ನಿನ್ನೆ ನಾಲ್ಕು ಇರಾಖೆಗಳ ಬೇಡಿಕೆಗಳನ್ನು ಮಂಡನೆ ಮಾಡಿದ್ದಾಗಿದೆ. ಈಗ ಇದರ ಬಗ್ಗೆ ಮೊದಲು ಪ್ರಾರಂಭ ಮಾಡುವವರು ಯಾರು ?

ಶ್ರೀ ಎಚ್. ಡಿ. ದೇವೇಗೌಡ.—ತಮ್ಮ ಅನುಮತಿ ಕೋರಿ ಒಂದು ವಿಷಯವನ್ನು ಪ್ರಸ್ತಾಪ ಮಾಡಬೇಕಾಗಿದೆ. ಶ್ರೀಮಾನ್ ಎ. ಎರ್. ಪಾಟೀಲರ ವಿಷಯಕ್ಕೆ ಸಂಬಂಧಪಟ್ಟಹಾಗೆ ನಿನ್ನೆ ಈ ಸಭೆಯಲ್ಲಿ ಚರ್ಚೆ ಮಾಡಬೇಕಾಗಿತ್ತು ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ಊರಿನಲ್ಲಿರಲಿಲ್ಲ. ಮಾನ್ಯ ಶ್ರೀ ಎ. ಎರ್. ಪಾಟೀಲ್ ಅವರು ಮಾತ್ರ ಬಂದಿದ್ದರು. ಈ ವಿಚಾರದ ಬಗ್ಗೆ ಚರ್ಚೆ ಯಾವ ದಿವಸಕ್ಕೆ ಹೋಗುತ್ತದೆ ?

ಅಧ್ಯಕ್ಷರು —ನಾನು ಮುಖ್ಯಮಂತ್ರಿಗಳನ್ನು ಕೇಳಿ ಹೇಳುತ್ತೇನೆ.

SRI D. DEVARAJ URS —I am going to make a statement shortly In advance I may convey to the House through you, Madam, that on this very issue there is a writ petition. Keeping that in view whatever I have got to say, I will make a statement.

ಅಧ್ಯಕ್ಷರು.—ನಾಳೆಯ ದಿವಸ ಸ್ಟೇಟ್‌ಮೆಂಟ್ ಮಾಡುತ್ತೀರಾ ?

SRI D. DEVARAJ URS.—Yes.

BUDGET ESTIMETES FOR 1977-78
DEMANDS FOR GRANTS

Demand No. 39, 40, 42, 45 and 46 (Debate Continued)

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ, ಕೃಷಿ ಸಚಿವರು, ಮೀನುಗಾರಿಕೆ ಸಚಿವರು, ತೋಟಗಾರಿಕೆ ಸಚಿವರು, ಹಾಗೂ ಹೈನುಗಾರಿಕೆ ಸಚಿವರು ಈ ಸಭೆಯಲ್ಲಿ ಮಂಡಿಸಿರತಕ್ಕ ಬೇಡಿಕೆಗಳನ್ನು ನಾನು ವಿರೋಧ ಮಾಡುತ್ತಾ ಎರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಮೊದಲು ನಮ್ಮ ಮೀನುಗಾರಿಕೆ ಹಾಗೂ ತೋಟಗಾರಿಕೆ ಇಲಾಖೆಗಳ ಬೇಡಿಕೆಗಳ ಬಗ್ಗೆ ಎರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈವತ್ತು ನಮ್ಮ ರಾಜ್ಯದಲ್ಲಿ ಸುಮಾರು 200 ಹೈಲಗಳ ಕರಾವಳಿ ಪ್ರದೇಶವಿದೆ ಹಾಗೂ ಒಳನಾಡಿನಲ್ಲಿ ಮೀನುಗಾರಿಕೆ ಅಭಿವೃದ್ಧಿ ಪಡಿಸುವ ಅನುಕೂಲಗಳು ಇರತಕ್ಕ ಪ್ರದೇಶವಿದೆ. ನಮ್ಮ ಮೀನುಗಾರಿಕೆ ಇಲಾಖೆಯು ಸಚಿವರು ಒಳನಾಡಿನ ಮೀನುಗಾರಿಕೆ ಬಗ್ಗೆಯಾಗಲೀ ಮತ್ತು ಕರಾವಳಿ ಮೀನುಗಾರಿಕೆ ಬಗ್ಗೆಯಾಗಲಿ ಮಾಡಿರುವ ಕೆಲಸಕಾರ್ಯಗಳು ಅಷ್ಟು ಪರಿಣಾಮಕಾರಿಯಾಗಿ ಆಗಿಲ್ಲ. ಮೀನುಗಾರಿಕೆಯಲ್ಲಿ ನಾವು ಸಾಧಿಸಬೇಕಾದಂತಹ ಪ್ರಗತಿಯನ್ನೂ ಸಹ ಇನ್ನೂ ಸಾಧನೆ ಮಾಡಿಲ್ಲ. ಇವತ್ತು ನಮ್ಮ ಕರಾವಳಿ ಪ್ರದೇಶದಲ್ಲಿರತಕ್ಕ ಮೀನುಗಾರರಿಗೆ ಸಿಗಬೇಕಾದ ಪ್ರೋತ್ಸಾಹ ಸಾಕಷ್ಟು ಪ್ರಮಾಣದಲ್ಲಿ ಇಲ್ಲದೇ ಇರುವುದರಿಂದ ಅಲ್ಲಿನ ಮೀನುಗಾರಿಕೆ ವ್ಯಾಪಕವಾಗಿ ಸಾಕಷ್ಟು ಅಭಿವೃದ್ಧಿ ಪಡಿಸುವುದಕ್ಕೆ ಆಗಿಲ್ಲ, ಇವತ್ತಿನವರೆಗೂ ಕರಾವಳಿ ಪ್ರದೇಶದಲ್ಲಿರುವ ಮೀನುಗಾರರಲ್ಲಿ ಅನೇಕರು ಮಧ್ಯವರ್ತಿ ಜನಗಳ ಹಿಡಿತದಲ್ಲಿ ಸಿಕ್ಕಿದ್ದಾರೆ. ಅವರನ್ನು ಅವರಿಂದ ತಪ್ಪಿಸುವುದಕ್ಕಾಗುವುದಿಲ್ಲ. ಅಲ್ಲಿರತಕ್ಕ ಮೀನುಗಾರರ ಸಹಕಾರ ಸಂಘಗಳು ಹಾಗೂ ಅಲ್ಲಿರತಕ್ಕ ದೊಡ್ಡ ಉದ್ದಿಮೆದಾರರು ಈಗಾಗಲೇ ಸಾಕಷ್ಟು ಪ್ರಮಾಣದಲ್ಲಿ ಬಡಜನರನ್ನು ಶೋಷಣೆ ಮಾಡುತ್ತಿದ್ದಾರೆ. ಆ ಶೋಷಣೆಯನ್ನು ತಪ್ಪಿಸುವುದಕ್ಕೆ ಇನ್ನೂ ಸಾಧ್ಯವಾಗಿಲ್ಲ. ಅಲ್ಲಿ ಮೀನುಗಾರರಿಗಾಗಿ ಒಂದು ಕಾರ್ಪೊರೇಷನ್ ಇದೆ. ಅದರಲ್ಲಿಯೂ ಕೂಡ ಶ್ರೀ ಬಿ. ಭಾಸ್ಕರ ಶೆಟ್ಟಿಯವರು ಕರಾವಳಿ ಪ್ರದೇಶದವರೇ. ಅವರು ಮೀನುಗಾರರ ಅಭಿವೃದ್ಧಿ ಕಾರ್ಪೊರೇಷನ್ನಿಗೆ ಅಧ್ಯಕ್ಷರಾಗಿದ್ದಾರೆ. ಅವರು ಬಂದ ಮೇಲಾದರೂ ಈ ಕರಾವಳಿ ಪ್ರದೇಶದ ಮೀನುಗಾರರ ಬಗ್ಗೆ ವಿಶೇಷವಾದಂತಹ ಗಮನವನ್ನು ಕೊಡುವುದರಲ್ಲಿ ಅಷ್ಟಾಗಿ ಅನ್ಯೆ, ಏನಕ್ಕೆ ವಹಿಸಿದಂತೆ ನನಗೆ ಕಂಡುಬರುತ್ತಾ ಇಲ್ಲ. ಅನೇಕಸಾರಿ ನಮಗೆ ಇದು ಸಂಶಯಕ್ಕೆ ಬರುತ್ತದೆ ರಾಜಕಾರಣದಲ್ಲಿರತಕ್ಕಂಥವರನ್ನು ಇಂತಹ ಒಂದು ವ್ಯಾಪಾರಿ ಸಂಸ್ಥೆಗೆ ಜವಾಬ್ದಾರಿ ವಹಿಸಿಕೊಟ್ಟರೆ ಅವರು ಹೆಚ್ಚಿಗೆ ರಾಜಕಾರಣದಲ್ಲಿಯೇ ತೊಡಗುತ್ತಾರೆ. ಅಂತಹವರು ಇಂತಹ ಸಂಸ್ಥೆಯ ಉದ್ದಿಮೆಯ ಬಗ್ಗೆ ಸಾಕಷ್ಟು ಲಕ್ಷ್ಯ ಹಾಗೂ ಉತ್ತೇಜನ ಕೊಡದೇ ಇರತಕ್ಕಂಥಾದ್ದು ಸ್ವಾಭಾವಿಕ. ಆದ್ದರಿಂದ ಅವರು ಈ ವಿಚಾರದಲ್ಲಿ ಅಷ್ಟಾಗಿ ಆಸಕ್ತಿ ವಹಿಸಿಲ್ಲವೆಂದು ನಾನು ದೃಢವಾಗಿ ಹೇಳುತ್ತೇನೆ. ಅದಕ್ಕೆ ಈಗ ಅವರಿಗಿರುವ ರಾಜಕೀಯದ್ಯ ಅಡಚಣೆಗಳೇ ಜಾಸ್ತಿ. ಮೀನುಗಾರಿಕೆಯ ಬಗ್ಗೆ ಕರಾವಳಿ ಪ್ರದೇಶದ ಮೀನುಗಾರಿಕೆಯ ಬಗ್ಗೆ, ಹಾಗೂ ಒಳನಾಡಿನ ಮೀನುಗಾರಿಕೆಯ ಅಭಿವೃದ್ಧಿಯ ಬಗ್ಗೆ ಸಾಕಷ್ಟು ಆಸಕ್ತಿ ವಹಿಸಿ ಇವ್ಯೂ ಕೂಡ ಇವುಗಳ ಬಗ್ಗೆ ಹೆಚ್ಚಿಗೆ ಅಭಿವೃದ್ಧಿಪಡಿಸಲು ಅವರು ನಿಜವಾಗಿಯೂ ಹೆಚ್ಚಿನ ಗಮನ ವಹಿಸಿಲ್ಲವೆಂದು ನಾನು ಹೇಳುತ್ತೇನೆ.